ಕರ್ನಾಟಕ ಸರಕಾರ

## ದ.ಕ. ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ

# ಸರಕಾರಿ ಪ್ರೌಢ ಶಾಲೆ, ಬಡಗ ಎಕ್ಕಾರು

### ಮಂಗಳೂರು ಉತ್ತರ ವಲಯ, ಮಂಗಳೂರು, ದ,ಕ. 574509



GHS BADAGA YEKKAR MANGALORE

प्रकाशति तु प्रकाशितः

Made with PosterMyWall.com



| ಕ್ರ. ಸಂ. | ವಿವರ | ಮಾಹಿತಿ |
|---|---|---|
| **1** | ಶಾಲೆಯ ಹೆಸರು | ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರು,<br>ಮಂಗಳೂರು ಉತ್ತರ ವಲಯ |
| **2** | ಸ್ಥಳ | ಬಡಗ ಎಕ್ಕಾರು ,ಮಂಗಳೂರು ಉತ್ತರ ವಲಯ, |
| **3** | ತಾಲ್ಲೂಕು | ಮಂಗಳೂರು ತಾಲೂಕು |
| **4** | ಜಿಲ್ಲೆ | ದಕ್ಷಿಣ ಕನ್ನಡ |
| **5** | ಶಾಲೆ ನಡೆಯುವ ಮಾಧ್ಯಮ | ಕನ್ನಡ ಹಾಗೂ ಆಂಗ್ಲ |
| **6** | ಸ್ಥಾಪನೆ ಆದ ವರ್ಷ | **2007** |
| **7** | ಮುಖ್ಯ ಶಿಕ್ಷಕರ ಹೆಸರು ಮತ್ತು ಮೊಬೈಲ್ ಸಂಖ್ಯೆ | ಶ್ರೀಮತಿ ಇಂದಿರಾ ಎನ್ ರಾವ್<br>**9108025319**<br>**yekkarhighschool@gmail.com** |

# ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ವಿವರ

| ತರಗತಿ ವಿಭಾಗ | ಪರಿಶಿಷ್ಟ ಜಾತಿ | | | | | | ಪರಿಶಿಷ್ಟ ಪಂಗಡ | | | | | | ಇತರೇ | | | | | | ಒಟ್ಟು (ಎಲ್ಲಾ ವರ್ಗದ ವಿದ್ಯಾರ್ಥಿಗಳು) | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಗಂಡು | | ಹೆಣ್ಣು | | ಒಟ್ಟು | | ಗಂಡು | | ಹೆಣ್ಣು | | ಒಟ್ಟು | | ಗಂಡು | | ಹೆಣ್ಣು | | ಒಟ್ಟು | | ಗಂಡು | | ಹೆಣ್ಣು | | ಒಟ್ಟು | |
| | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ |
| 8 ಎ | 2 | 2 | 3 | 3 | 5 | 5 | 2 | 2 | 0 | 0 | 2 | 2 | 3 | 3 | 3 | 3 | 6 | 6 | 7 | 7 | 6 | 6 | 13 | 13 |
| 8 ಬಿ | 1 | 1 | 3 | 3 | 4 | 4 | 0 | 0 | 0 | 0 | 0 | 0 | 15 | 15 | 17 | 17 | 32 | 32 | 16 | 16 | 20 | 20 | 36 | 36 |
| 9 ಎ | 1 | 1 | 4 | 4 | 5 | 5 | 0 | 0 | 1 | 1 | 1 | 1 | 3 | 3 | 1 | 1 | 4 | 4 | 4 | 4 | 6 | 6 | 10 | 10 |
| 9 ಬಿ | 0 | 0 | 0 | 0 | 0 | 0 | 0 | 0 | 0 | 0 | 0 | 0 | 12 | 12 | 12 | 12 | 24 | 24 | 12 | 12 | 12 | 12 | 24 | 24 |
| 10 ಎ | 3 | 3 | 3 | 3 | 6 | 6 | 0 | 0 | 1 | 1 | 1 | 1 | 3 | 3 | 2 | 2 | 5 | 5 | 6 | 6 | 6 | 6 | 12 | 12 |
| 10 ಬಿ | 0 | 0 | 2 | 2 | 2 | 2 | 1 | 1 | 0 | 0 | 1 | 1 | 10 | 10 | 22 | 22 | 32 | 32 | 11 | 11 | 24 | 24 | 35 | 35 |
| ಒಟ್ಟು | 7 | 7 | 15 | 15 | 22 | 22 | 3 | 3 | 2 | 2 | 5 | 5 | 46 | 46 | 57 | 57 | 103 | 103 | 56 | 56 | 74 | 74 | 130 | 130 |

1. ಮಂಜೂರಾದ ಶಿಕ್ಷಕರ ಹುದ್ದೆಗಳು : 1+10

2. ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ : 1+10

3. ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ : 0

4. ಕೊಠಡಿಗಳ ಸಂಖ್ಯೆ : 11

## ಕಳೆದ ಮೂರು ವರ್ಷಗಳ ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶದ ವಿವರ

| ವರ್ಷ | ಪರೀಕ್ಷೆಗೆ ಹಾಜರಾದವರು | ತೇರ್ಗಡೆ ಹೊಂದಿದವರು | ಫಲಿತಾಂಶ | GQPI |
|---|---|---|---|---|
| 2021-22 | 28 | 27 | 96.4 | 82.23 - A |
| 2022-23 | 32 | 28 | 87.5 | 73.26 - B |
| 2023-24 | 46 | 45 | 97.82 | 79.62 - A |



ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢ ಶಾಲೆ, ಬಡಗ ಎಕ್ಕಾರು
ಮಂಗಳೂರು ಉತ್ತರ ವಲಯ
ಪೋಸ್ಟ್ ಎಕ್ಕಾರು 574 509
ಮಂಗಳೂರು ತಾಲೂಕು, ದ.ಕ

# ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸರಕಾರಿ ಪ್ರೌಢ ಶಾಲೆ ಬಡಗ ಎಕ್ಕಾರು, ಮಂಗಳೂರು ಉತ್ತರ ವಲಯ. ಮಂಗಳೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಪ್ರಶಾಂತ ಸುಂದರ ಪ್ರಕೃತಿಯ ಮಡಿಲು ಕಟೀಲು ನಂದಿನಿ ನದಿಯ ಬಳಿಯಲ್ಲಿ ಗ್ರಾಮಸ್ಥರ, ಶಾಲಾಭಿಮಾನಿಗಳ ಸಹಕಾರದೊಂದಿಗೆ ಗ್ರಾಮೀಣ ಪ್ರದೇಶವಾದ 'ಎಕ್ಕಾರು' ಎಂಬಲ್ಲಿ 2007-08 ರಲ್ಲಿ ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರು ಶುಭಾರಂಭಗೊಂಡಿತು.

## ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳಲ್ಲಿ ಶಿಕ್ಷಣ ಸೌಲಭ್ಯ:

ಶಾಲೆ ಸ್ಥಾಪನೆಗೊಂಡ ವರ್ಷ ಕೇವಲ 11 ವಿದ್ಯಾರ್ಥಿಗಳಿದ್ದ ಶಾಲೆಯಲ್ಲಿ 2016-17 ರಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮದಲ್ಲೂ ಶಿಕ್ಷಣ ನೀಡಲಾರಂಭಿಸಿತು. ಪ್ರಸ್ತುತ ಶೈಕ್ಷಣಿಕ ವರ್ಷ 2024-25ರಲ್ಲಿ 130 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು **ಮೌಲ್ಯಾಧಾರಿತ ಗುಣಾತ್ಮಕ ಶಿಕ್ಷಣ**ವನ್ನು ನೀಡುವಲ್ಲಿ ಪರಿಪೂರ್ಣತೆಯನ್ನು ಕಂಡ ಸಮೃದ್ಧ ಶಾಲೆ ಎನಿಸಿದೆ.

## ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಪ್ರಯತ್ನಗಳು:

**'ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಮನೋಸ್ಥೈರ್ಯದಿಂದ ಮುನ್ನುಗ್ಗುವಂತೆ ಅಣಿ ಮಾಡುವುದು'** ಎಂಬ ಶಾಲಾ ಧ್ಯೇಯ ವಾಕ್ಯಕ್ಕೆ ಸಮರ್ಪಕವಾಗಿ ಶಾಲೆಯಲ್ಲಿ ಪಠ್ಯ ಮತ್ತು ಪಠ್ಯಪೂರಕ ಚಟುವಟಿಕೆಗಳು ಅಭಿವೃದ್ಧಿ ಪಥದಲ್ಲಿ ಸಾಗುತ್ತಿವೆ.ಪಠ್ಯದ ಸುಗಮ ಕಲಿಕೆಗಾಗಿ ಎಲ್ಲಾ ವಿಷಯಗಳಿಗೂ ಸಂಪನ್ಮೂಲ ಭರಿತ ಶಿಕ್ಷಕರ ತಂಡ ನಿರಂತರವಾಗಿ ಶ್ರಮಿಸುತ್ತಿದೆ. ಇದಕ್ಕೆ ಪೂರಕವೆಂಬಂತೆ ಶಾಲಾ ಎಸ್ ಎಸ್ ಎಲ್ ಸಿ ಪರೀಕ್ಷಾ ಗುಣಮಟ್ಟವು ಪ್ರತಿ ವರ್ಷವೂ **'ಎ'** ಶ್ರೇಣಿಯನ್ನು ದಾಖಲಿಸಿದೆ. ಆಂಗ್ಲ ಮಾಧ್ಯಮದಲ್ಲಿ **100 ಶೇಕಡಾ ಫಲಿತಾಂಶ**ವನ್ನು ಸಾಧಿಸಿದೆ.

## ಚಿತ್ರಕಲೆಯಲ್ಲಿ ರಾಜ್ಯಮಟ್ಟ ಹಾಗೂ ಕ್ರೀಡೆಯಲ್ಲಿ ರಾಷ್ಟ್ರಮಟ್ಟದ ಸಾಧನೆಗಳು:

ಅನುಭವಿ ಚಿತ್ರಕಲಾ ಶಿಕ್ಷಕರಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಪ್ರತಿ ವರ್ಷವೂ ಚಿತ್ರಕಲೆಯ ಗ್ರೇಡ್ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಶಿಕ್ಷಣ ಇಲಾಖೆಯ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ವಿಜೇತರಾಗಿದ್ದಾರೆ.ಹಾಗೆಯೇ ಅನೇಕ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಶಾಲೆಗೆ ಕೀರ್ತಿ ತಂದ ಗರಿಮೆ. ಆಟದಿಂದ ಆರೋಗ್ಯ ಎಂಬಂತೆ ಅನುಭವಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಶಾಲೆ ಹೊಂದಿದೆ ಒಳಾಂಗಣ ಮತ್ತು ಹೊರಾಂಗಣ ಆಟಗಳಿಗೆ ಬಹು ಪ್ರಾಮುಖ್ಯವನ್ನು ನೀಡಿದೆ. ಪಂದ್ಯಾಟಗಳು ಆಟೋಟಗಳು ಯೋಗ ಇತ್ಯಾದಿ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ನಿರಂತರವಾಗಿ ಭಾಗವಹಿಸುತ್ತಿದ್ದಾರೆ. ಯೋಗ ಮತ್ತು ಏರೋಬಿಕ್ಸ್ ತರಬೇತಿ ನಿಯಮಿತವಾಗಿ ನಡೆಯುತ್ತಿದೆ. ಖೋಖೋ

ಪಂದ್ಯಾಟದಲ್ಲಿ ರಾಷ್ಟ್ರಮಟ್ಟದ ಸಾಧನೆ,ಜಂಪ್ ರೋಪ್ ಹಾಗೂ ಅಥ್ಲೆಟಿಕ್ಸ್ ನಲ್ಲಿ ರಾಜ್ಯಮಟ್ಟದ ಸಾಧನೆಯನ್ನು ಮಾಡಿ **ಗ್ರಾಮೀಣ ವಲಯದ ಶಾಲೆಯೊಂದು ರಾಷ್ಟ್ರಮಟ್ಟದಲ್ಲೂ ಪ್ರಸಿದ್ಧಿ ಪಡೆದು ಊರಿನ ಹೆಮ್ಮೆ ಹೆಚ್ಚಿಸಿದ ಶಾಲೆ ಎನಿಸಿದೆ**.

**ತಂತ್ರಜ್ಞಾನ ಆಧಾರಿತ ಪ್ರಯೋಗಾತ್ಮಕ ಕಲಿಕಾ ವಿಧಾನದ ಅಳವಡಿಕೆ:**

ಚಟುವಟಿಕೆ ಆಧಾರಿತ ಕಲಿಕಾ ವಿಧಾನ ವಾಗಿ ಪ್ರಯೋಗಾಲಯದ ಪರಿಪೂರ್ಣ ಬಳಕೆ ಹಾಗೂ ಗ್ರಂಥಾಲಯದ ಸದ್ಬಳಕೆ ಶಾಲೆಯಲ್ಲಿ ನಡೆಯುತ್ತಿದೆ. ಕಂಪ್ಯೂಟರ್ ಆಧಾರಿತ ಬೋಧನೆ ಮತ್ತು ಕಲಿಕೆಗೆ ಮಹತ್ವ ನೀಡಿರುವುದರಿಂದ ಕರ್ನಾಟಕ ಸರಕಾರದ ಐಸಿಟಿ ಯೋಜನೆಯಡಿ ಆಯ್ಕೆಯಾದ ಶಾಲೆಯಾಗಿದ್ದು, ನೀಡಿದ 11 ಕಂಪ್ಯೂಟರ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಗಣಕಯಂತ್ರ ಶಿಕ್ಷಣವನ್ನು ನೀಡುತ್ತಿರುವುದು ಬಹು ಸಂತಸದಾಯಕವಾಗಿದೆ.

**ವ್ಯಕ್ತಿತ್ವ ವಿಕಸನಗೊಳಿಸುವ ವಿವಿಧ ಸಂಘಗಳು: ELC ಹಾಗೂ ECO Clubಗಳ ರಾಜ್ಯಮಟ್ಟದ ಸಾಧನೆ**

ಜೀವನ ಕೌಶಲಗಳ ಬೆಳವಣಿಗೆಗಾಗಿ ವಿವಿಧ ಸಂಘಗಳು ಶಾಲೆಯಲ್ಲಿ ಕಾರ್ಯ ತತ್ಪರವಾಗಿವೆ. 'ಮತದಾರರ ಸಾಕ್ಷರತಾ ಸಂಘ (ELC)' ಮೂಲಕ ನೋಡೆಲ್ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮತದಾರರ ಜಾಗೃತಿಗಾಗಿ ಸ್ಪರ್ಧೆಗಳನ್ನು ಹಾಗೂ ವಿವಿಧ ಕಾರ್ಯಕ್ರಮ ಶಾಲೆಯಲ್ಲಿ ಮತ್ತು ಸಮುದಾಯದಲ್ಲಿ ನಡೆಸಿ ನಡೆಸಿದ ನೀಡಿದ ವರದಿಯು ರಾಜ್ಯಮಟ್ಟದಲ್ಲಿ **BEST ELECTORAL LITERACY CLUB** ಎಂಬ ಪ್ರಶಸ್ತಿಗೆ ಪಾತ್ರವಾಗಿದೆ. .ಶಾಲೆಯ **'ಇಕೋ ಕ್ಲಬ್'** ನಲ್ಲಿ ಐದು ವಿದ್ಯಾರ್ಥಿಗಳು ಮತ್ತು ಒಬ್ಬ ಶಿಕ್ಷಕರು ರಾಜ್ಯಮಟ್ಟದಲ್ಲಿ ಆಯ್ಕೆಯಾಗಿ ಮೆಚ್ಚುಗೆ ಪಡೆದ ಶಾಲೆ ಎನಿಸಿದೆ. ಅಂತೆಯೇ ಗ್ರಾಹಕರ ಸಂಘ, ಆಪ್ತ ಸಲಹೆ ಮತ್ತು ಮಾರ್ಗದರ್ಶನ ಕೇಂದ್ರ, ಆರೋಗ್ಯ ಸಂಘ, ಕ್ರೀಡಾ ಸಂಘ, ಸಾಂಸ್ಕೃತಿಕ ಸಂಘ, ಕಲಾಸಂಘ, ಸಿ ಸಿ ಆರ್ ಟಿ ಮೊದಲಾದ ಅನೇಕ ಸಂಘಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿದೆ.

**ಪ್ರತಿಭಾ ಕಾರಂಜಿ ಹಾಗೂ ಪಠ್ಯಪೂರಕ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಗಳು:**

ಶಿಕ್ಷಣ ಇಲಾಖೆ ನಡೆಸುವ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಜಿಲ್ಲಾ ಮಟ್ಟದವರೆಗೆ ಹಾಗೂ ವಿವಿಧ ಪ್ರಬಂಧ ಹಾಗೂ ಕನವ ರಚನಾ ಸ್ಪರ್ಧೆಗಳಲ್ಲಿ ರಾಜ್ಯಮಟ್ಟದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ – ಬಹುಮಾನ ಗಳಿಸಿದ ಸಂಭ್ರಮ ಶಾಲೆಗಿದೆ. ಅನೇಕ ರಾಷ್ಟ್ರೀಯ ಹಬ್ಬಗಳು, ದಿನಾಚರಣೆಗಳು, ಪ್ರಸಿದ್ಧ ವ್ಯಕ್ತಿಗಳ ಜಯಂತಿಗಳ ಸಂದರ್ಭ ನಡೆಸುವ ಸ್ಪರ್ಧೆಗಳಲ್ಲಿ ಇಲಾಖೆ ಮತ್ತು ತಾಲೂಕು ಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಕೀರ್ತಿ ಇದೆ.

**ಶಾಲಾ ವಾರ್ಷಿಕೋತ್ಸವ ಹಾಗೂ ಶೈಕ್ಷಣಿಕ ಪ್ರವಾಸ:**

ಪ್ರತಿ ವರ್ಷವೂ ಬಹು ಸಂಭ್ರಮದಿಂದ ಆಚರಿಸುವ ಶಾಲಾ ಕಾರ್ಯಕ್ರಮಗಳಿಗೆ ಕಿರೀಟವಿಟ್ಟಂತೆ ನಡೆಯುವ ಶಾಲೆಯ ವಾರ್ಷಿಕೋತ್ಸವವು ಶಾಲಾ ವಿದ್ಯಾರ್ಥಿಗಳ ಪ್ರತಿಭೆಯನ್ನು ಗ್ರಾಮದ ಜನರಿಗೆ ತೋರುವ ಕೈಗನ್ನಡಿಯಾಗಿದ್ದು,, ಅದೇ ಕಾರಣದಿಂದ ಪ್ರಸಿದ್ಧಿ ಪಡೆದಿದೆ. 'ದೇಶ ಸುತ್ತು – ಕೋಶ ಓದು' ಎಂಬ ಹಿರಿಯರ ನುಡಿಯಂತೆ ಶೈಕ್ಷಣಿಕ ಪ್ರವಾಸ, ಕಿರು ಹೊರ ಸಂಚಾರಗಳು

ಶಾಲೆಯಲ್ಲಿ ಕಲಿತ ಕಲಿತೆಯನ್ನು ವಿಸ್ತರಿಸುವ ಆಕರ್ಷಕ ಅವಕಾಶಗಳಾಗಿವೆ.ಶೈಕ್ಷಣಿಕ / ಸಾಂಸ್ಕೃತಿಕ ಕ್ಷೇತ್ರಗಳಿಗೆ ವಿದ್ಯಾರ್ಥಿಗಳ ಪ್ರವಾಸ ಶಿಕ್ಷಣದ ಭಾಗವಾಗಿರುವಂತೆ ಯೋಜಿಸಲಾಗುತ್ತಿದೆ.

**ಯಕ್ಷ ಶಿಕ್ಷಣ, ಯೋಗಾಭ್ಯಾಸ ಹಾಗೂ ಕರಾಟೆ ಕಲಿಕೆಗೆ ಅವಕಾಶ:**

ಗ್ರಾಮೀಣ ಪರಿಸರದ ಮಕ್ಕಳನ್ನು 21ನೇ ಶತಮಾನದ ವೇಗಕ್ಕೆ ತಕ್ಕಂತೆ ಸ್ಪರ್ಧಾತ್ಮಕವಾಗಿ ಬೆಳೆಸುವ ಜೊತೆಗೆ ಸಂಸ್ಕೃತಿಯ ಬೇರುಗಳನ್ನುಉಳಿಸಿಕೊಳ್ಳುವ ದೃಷ್ಟಿಯಿಂದ ಶಾಲೆಯಲ್ಲಿ **ಯಕ್ಷಧ್ರುವ ಪಟ್ಲ ಫೌಂಡೇಶನ್ಸ್ (ರಿ.) ಮಂಗಳೂರು** ಇದರ ಕಟೀಲು ಎಕ್ಕಾರು ಘಟಕದ ಸಹಯೋಗದಲ್ಲಿ ಯಕ್ಷ ಶಿಕ್ಷಣವನ್ನು ನೀಡಲಾಗುತ್ತಿದೆ. ಭಾರತದ ಯೋಗ ಪರಂಪರೆ ಆರೋಗ್ಯಯುತ ಜೀವನ ಶೈಲಿಯನ್ನು ಉತ್ತೇಜಿಸುವ ಕಾರಣದಿಂದ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣವನ್ನು ಸ್ಥಳೀಯ ಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ಶಾಲೆಯ ದೈಹಿಕ ಶಿಕ್ಷಕರ ನೆರವಿನಿಂದ ನೀಡಲಾಗುತ್ತಿದೆ, ಆತ್ಮರಕ್ಷಣೆ ಹಾಗೂ ಆತ್ಮವಿಶ್ವಾಸ ತುಂಬುವ ಉದ್ದೇಶದಿಂದ ಕರಾಟೆ ಶಿಕ್ಷಣಕ್ಕೆ ಶಾಲೆಯಲ್ಲಿ ಅಪೂರ್ವ ಅವಕಾಶ ಸೃಷ್ಟಿಸಲಾಗಿದ್ದು ಇಲಾಖೆ ಹಾಗೂ ಸ್ಥಳೀಯ ಕರಾಟೆ ಶಿಕ್ಷಣ ನೀಡಲಾಗುತ್ತಿದ್ದು ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕರಾಟೆ ಕಲೆಯ ಪ್ರದರ್ಶನ ಅತಿಥಿಗಳ, ಪೋಷಕರ ಹಾಗೂ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದೆ.

**ಸರ್ಕಾರದ ಸೌಲಭ್ಯಗಳ ಜೊತೆಗೆ ದಾನಿಗಳ ನೆರವಿನ ಹಸ್ತ:**


ಸರಕಾರದ ನೀಡಲಾಗುವ ಉಚಿತ ಸೌಲಭ್ಯಗಳಾದ ಪಠ್ಯಪುಸ್ತಕ, ಸಮವಸ್ತ್ರ, ಅಕ್ಷರ ದಾಸೋಹ-ಕ್ಷೀರ ಭಾಗ್ಯ,ಚಿಕ್ಕಿ/ಮೊಟ್ಟೆ ವಿತರಣೆ,ಶೂ- ಸಾಕ್ಸ್ ಹಾಗೂ ವಿವಿಧ ವಿದ್ಯಾರ್ಥಿವೇತನಗಳು ಎಲ್ಲಾ ವಿದ್ಯಾರ್ಥಿಗಳಿಗೂ ಲಭ್ಯವಾಗಿವೆ. ಶಾಲೆಯ ಅಭಿವೃದ್ಧಿಗೆ ಸದಾ ಸಹಕರಿಸುವ ಸ್ಥಳೀಯ ಪರಿಸರದ ಸಂಘ-ಸಂಸ್ಥೆಗಳ ವಿದ್ಯಾರ್ಥಿವೇತನಗಳು, ಶಾಲಾ ಬ್ಯಾಗ್, ಐಡಿ ಕಾರ್ಡ್, ಪಂಚಾಯತ್ ವತಿಯಿಂದ ಸಿಗುವ ಸೌಲಭ್ಯಗಳು, ಜನಪ್ರತಿನಿಧಿಗಳ ಸಹಕಾರ, ಶಾಲೆಯನ್ನು ಸರ್ವಾಂಗೀಣವಾಗಿ ಪ್ರಗತಿ ಹೊಂದಲು ಪ್ರೇರಣೆ ನೀಡುತ್ತಿವೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ವತಿಯಿಂದ ಎಂಟನೆಯ ತರಗತಿ ವಿದ್ಯಾರ್ಥಿಗಳಿಗಾಗಿ ನಡೆಯುವ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ನಮ್ಮ ಶಾಲಾ ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಸರಕಾರಿ ಶಾಲಾ ಶಿಕ್ಷಕರ ಸೇವಾ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಂತೆಯೇ ಕಳೆದ ಶೈಕ್ಷಣಿಕ ವರ್ಷ ಕ್ಕಿಂತ ಪ್ರಸ್ತುತ ವರ್ಷ ಶೈಕ್ಷಣಿಕ ವರ್ಷದಲ್ಲಿ ಶಾಲಾ ದಾಖಲಾತಿ ದ್ವಿಗುಣಗೊಂಡಿರುವುದು ಗ್ರಾಮೀಣ ಭಾಗದ ಸರಕಾರಿ ಪ್ರೌಢಶಾಲೆಯ **ಶಾಲಾ ಪರಿಸರ, ಸಮುದಾಯ, ಶಾಲಾಭಿಮಾನಿಗಳ ಪ್ರೋತ್ಸಾಹದಿಂದ** ಎಂದು ಹೇಳುವುದು ಸಮರ್ಥ ಮತ್ತು ಅರ್ಥಪೂರ್ಣವಾಗಿದೆ.

## 1) ಕುಡಿಯುವ ನೀರು ಮತ್ತು ಶೌಚಾಲಯ ಮತ್ತು ನಿರ್ವಹಣೆ ವ್ಯವಸ್ಥೆ :

### I.(1) ಕುಡಿಯುವ ನೀರಿನ ಸೌಲಭ್ಯ

ಸರ್ವಶಿಕ್ಷಣ ಅಭಿಯಾನದ ಮುಖಾಂತರ ಶಾಲೆಯ ವಿದ್ಯಾರ್ಥಿಗಳಿಗೆ ಶುದ್ಧವಾದ ಕುಡಿಯುವ ನೀರಿನ ಘಟಕವನ್ನು ಅಳವಡಿಸಲಾಗಿದ್ದು, ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆಯಲ್ಲಿ ಇದು ನಿರ್ಣಾಯಕ ಪಾತ್ರ ವಹಿಸುತ್ತಿದೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು

ಬಿಸಿ ಹಾಗೂ ತಂಪಾದ ಶುದ್ಧ ನೀರನ್ನು ತಮ್ಮ ಅಗತ್ಯಾನುಸಾರ ಬಳಸಲು ಇದು ಸಹಕಾರಿಯಾಗಿದೆ. ವಿದ್ಯಾರ್ಥಿಗಳಲ್ಲಿ ಆರೋಗ್ಯಮಟ್ಟದ ಸುಧಾರಣೆಗೆ ಇದು ಬಹು ಮುಖ್ಯ ಹೆಜ್ಜೆಯೆನಿಸಿದೆ.






## I.(2). ಶಾಲಾ ಕೈತೋಟ:

ಶಾಲೆಯಲ್ಲಿ ಪರಿಸರ ಪ್ರೀತಿ ಬೆಳೆಸುವ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೊಡಗುವಂತೆ ವಿದ್ಯಾರ್ಥಿಗಳನ್ನು ಇಕೋ ಕ್ಲಬ್ ಸಹಕಾರದಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು ಇದರಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡು ಶಾಲಾ ಕೈತೋಟ ಬೆಳೆಸಿ ನಿರ್ವಹಿಸುತ್ತಿದ್ದಾರೆ. ಶ್ರೀಮತಿ ರಮ್ಯ ಕೆ. ಮತ್ತು ಶ್ರೀಮತಿ ರಾಜಶ್ರೀ ಕೆ. ಇವರು ಮಾರ್ಗದರ್ಶಿ ಶಿಕ್ಷಕರಾಗಿ ರಾಜ್ಯಮಟ್ಟದಲ್ಲಿ ಶಾಲೆ ತನ್ನ ಇಕೋ ಕ್ಲಬ್ ಚಟುವಟಿಕೆಗಳಿಗೆ ಪ್ರಶಸ್ತಿ ಪಡೆಯುವಲ್ಲಿ ಶ್ರಮಿಸಿದ್ದಾರೆ.







## I.(3) ತರಗತಿ ಕೊಠಡಿಗಳು :

ಶಾಲಾ ಕೊಠಡಿಗಳನ್ನು ವಿದ್ಯಾರ್ಥಿ ಸ್ನೇಹಿಯಾಗಿ ಪರಿವರ್ತಿಸಲು ದಾನಿಗಳ ನೆರವಿನಿಂದ 1 ಸ್ಮಾರ್ಟ್ TV ಹಾಗೂ 2 ಪ್ರೊಜೆಕ್ಟರ್ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಅವುಗಳನ್ನು ಯಶಸ್ವಿಯಾಗಿ ಬಳಸುವ ಪ್ರಯತ್ನ ಆರಂಭಿಸಲಾಗಿದೆ. ತಂತ್ರಜ್ಞಾನ ಆಧಾರಿತ ಬೋಧನೆಯ ವಿಧಾನ ಅಳವಡಿಸಿಕೊಂಡಿರುವ ಶಿಕ್ಷಕ ವರ್ಗ ಶಾಲೆಯ ಉನ್ನತಿಗೆ ಈ ಸೌಲಭ್ಯವನ್ನು ಯಶಸ್ವಿಯಾಗಿ ಬಳಸುತ್ತಿದ್ದು,ಶಾಲಾ ದಾಖಲಾತಿ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಈ ಕ್ರಮ ಸಹಾಯಕವಾಗಿದೆ.




ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರು ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರಮಟ್ಟವನ್ನು ತಲುಪಲು ಸೀಮಿತ ವ್ಯವಸ್ಥೆಯ ಕ್ರೀಡಾಂಗಣದಲ್ಲೇ





ತಯಾರಿ ನಡೆಸುತ್ತಿದ್ದು ಅದನ್ನು ವಿಸ್ತರಿಸಲು ಹಾಗೂ ಸಮತಟ್ಟುಗೊಳಿಸಿಕೊಡಲು ಗ್ರಾಮಸ್ಥರು ಹಾಗೂ ದಾನಿಗಳು ಶ್ರಮಿಸಿರುತ್ತಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಕ್ರೀಡಾ ಸಾಧನೆಯ ಮೂಲ ಪ್ರೇರಣೆಯಾದ ಕ್ರೀಡಾಂಗಣವು ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ವಿದ್ಯಾಲತಾ ಹಾಗೂ ವಿದ್ಯಾರ್ಥಿಗಳ ಕಾರ್ಯರಂಗವಾಗಿ ಅಥ್ಲೆಟಿಕ್ಸ್‌ನಲ್ಲಿ ರಾಜ್ಯಮಟ್ಟ ಹಾಗೂ  ಖೋಖೋ ಕ್ರೀಡೆಗಳಲ್ಲಿ ರಾಷ್ಟ್ರಮಟ್ಟದ ಸಾಧನೆ ಮಾಡಲು ಸಹಾಯಕವಾಗಿದೆ.

## II.ಸಹಪಠ್ಯ ಚಟುವಟಿಕೆಗಳು :

### II.(1) ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ  ಖೋಖೋ ತಂಡದ ಅದ್ಭುತ ಸಾಧನೆ :

ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರು ಮಂಗಳೂರು ತಾಲೂಕು ಇಲ್ಲಿನ ಬಾಲಕಿಯರ  ಖೋ ಖೋ ತಂಡವು ಎಚ್ ಸಿ ಎಲ್ ಫೌಂಡೇಶನ್ ಇವರು ಸಂಘಟಿಸಿದ ಸ್ಪೋರ್ಟ್ಸ್ ಫಾರ್ ಚೇಂಜ್ ಸ್ಪರ್ಧೆಯ ರಾಜ್ಯಮಟ್ಟದ ಪಂದ್ಯದಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದು ಚೆನ್ನೈನಲ್ಲಿ ನಡೆಯಲಿರುವ ದಕ್ಷಿಣ ಭಾರತ ವಲಯ ಮಟ್ಟಕ್ಕೆ ಆಯ್ಕೆಯಾಗಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ಈ ಕ್ರೀಡಾಕೂಟದಲ್ಲಿ ದ್ವಿತೀಯ ಸ್ಥನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ. ತಂಡದ ನಾಯಕಿ ದರ್ಶಿನಿ ,ತಂಡದ ಸದಸ್ಯರಾದ ಸ್ಮಿತಾ, ತನ್ವಿ ಪೂಜಾರಿ ,ವಿಂತಿ ಬಿ ಶೆಟ್ಟಿ, ರಕ್ಷಿತಾ ,ಹರ್ಷಿತ ,ದೀಕ್ಷ, ಅಧಿತಿ ,ಯಜ್ಞ ,ಸಮೀಕ್ಷಾ, ಭೂಮಿಕ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀಮತಿ ವಿದ್ಯಾಲತಾ  ಇವರೊಂದಿಗೆ ತಂಡದ ವ್ಯವಸ್ಥಾಪಕರಾಗಿ ಸಹಕರಿಸಿದ ಶಾಲಾ ಶಿಕ್ಷಕರಾದ ಡಾ.ಅನಿತ್ ಕುಮಾರ್ ಇವರನ್ನು ಶಾಲಾ ಮುಖ್ಯೋಪಾಧ್ಯಾಯನಿ ಶ್ರೀಮತಿ ಇಂದಿರಾ ಎನ್ ರಾವ್, ಶಿಕ್ಷಕರು, ಪೋಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಹಯೋಗದಲ್ಲಿ ಗೌರವಿಸಲಾಯಿತು

ಜುಲೈ 24, 2024ರಂದು ತಮಿಳುನಾಡಿನ ಚೆನ್ನೈನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ದಕ್ಷಿಣ ಭಾರತ ವಲಯ ಮಟ್ಟವನ್ನು ಪ್ರತಿನಿಧಿಸಿ **ರಾಷ್ಟ್ರ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು** ನಮ್ಮ ರಾಜ್ಯದ ಕೀರ್ತಿ ಪತಾಕೆಯನ್ನು ರಾಷ್ಟ್ರ ಮಟ್ಟದಲ್ಲಿ ಬೆಳಗಿಸಿದ್ದಾರೆ. ನಮ್ಮ ವಿದ್ಯಾರ್ಥಿಗಳು ಹಾಗೂ ಅವರನ್ನು ಯುಕ್ತವಾಗಿ ತರಬೇತಿ ನೀಡಿ ಸಜ್ಜುಗೊಳಿಸುತ್ತಿರುವ ನಮ್ಮ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರು ಅಭಿನಂದನಾರ್ಹರು.



ಉದಯವಾಣಿ

4/4

**ಎಕ್ಕಾರು ಶಾಲೆಯ ಖೋಖೋ ತಂಡ ರಾಷ್ಟ್ರಮಟ್ಟಕ್ಕೆ ಆಯ್ಕೆ: ಗ್ರಾಮಕ್ಕೆ ಹೆಮ್ಮೆ**

**ಬಜಪೆ, ಜೂ.25:** ಎಕ್ಕಾರಿನಂತಹ ಗ್ರಾಮೀಣ ಪ್ರದೇಶವೊಂದರ ಸರಕಾರಿ ಪ್ರೌಢಶಾಲೆಯ ಖೋಖೋ ತಂಡ ದಕ್ಷಿಣ ಭಾರತ ವಲಯ ಚಾಂಪಿಯನ್ ಶಿಪ್ 2024ರಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವುದು ವಿದ್ಯಾರ್ಥಿಗಳ ಅಪ್ರತಿಮ ಸಾಧನೆಯಾಗಿದೆ. ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಮುಖೇನ ಇತಿಹಾಸ ನಿರ್ಮಿಸಿ ಹೊಸ ಅಧ್ಯಾಯ ಸೃಷ್ಟಿಸಿದೆ ಹಾಗೂ ಗ್ರಾಮಕ್ಕೆ ಹೆಮ್ಮೆಯಾಗಿದೆ ಎಂದು ಎಕ್ಕಾರು ಗ್ರಾ. ಪಂ. ಮಾಜಿ ಅಧ್ಯಕ್ಷ ಸುರೇಶ್ ಶೆಟ್ಟಿ ಹೇಳಿದರು.

ಎಚ್‌ಸಿಎಲ್ ಫೌಂಡೇಷನ್ ವತಿಯಿಂದ ಆಂಧ್ರಪ್ರದೇಶದ ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾನಿಲಯ ಗುಂಟೂರುನಲ್ಲಿ ನಡೆದ ದಕ್ಷಿಣ ಭಾರತ ವಲಯ ಚಾಂಪಿಯನ್ ಶಿಪ್ 2024ರಲ್ಲಿ ಖೋಖೋ ಪಂದ್ಯಾವಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾದ ಸರಕಾರಿ ಪ್ರೌಢ ಶಾಲೆ ಬಡಗ ಎಕ್ಕಾರು ಇಲ್ಲಿನ ಬಾಲಕಿಯರ ಖೊ ಖೋ ತಂಡ ಮತ್ತು ತರಬೇತುದಾರ ದೈಹಿಕ ಶಿಕ್ಷಣ ಶಿಕ್ಷಕಿ ವಿದ್ಯಾಲತಾ ಮತ್ತು ತಂಡದ ವ್ಯವಸ್ಥಾಪಕ ಡಾ। ಅನಿತ್ ಕುಮಾರ್ ಅವರಿಗೆ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ವೃಂದ ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ವತಿಯಿಂದ ನಡೆದ ಸಮ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಸುದೀಪ್ ಅಮೀನ್, ಸದಸ್ಯರಾದ ಸುರೇಶ್ ಶೆಟ್ಟಿ ಮೇಲ್ವಿನ್, ಸುರೇಶ್ ಕೆ., ಶ್ಯಾಮಲಾ, ಬಬಿತಾ, ವಿನೋದಾ, ಪ್ರಭಾರ ಮುಖ್ಯ ಶಿಕ್ಷಕಿ ಪೂರ್ಣಿಮಾ ಎಚ್.ಎಂ. ಶಿಕ್ಷಕರಾದ ರಮ್ಯಾ, ರಾಜಶ್ರೀ ಕೆ. ವಿನ್ನಿ ನಿರ್ಮಲ ಡಿ'ಸೋಜಾ, ಜಯಂತಿ ಹಾಗೂ ವಿದ್ಯಾರ್ಥಿಗಳ ಹೆತ್ತವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕ್ರೀಡಾಪಟುಗಳ ಪೋಷಕರಾದ ಭವಾನಿ, ಲಾವಣ್ಯ ಟಿ. ಹೆಗಡೆ, ಬೇಬಿ, ಶೋಭಾ ವೆಂಕಪ್ಪ ಅವರನ್ನು ಅಭಿನಂದಿಸಲಾಯಿತು.

ಶಿಕ್ಷಕಿ ವಿದ್ಯಾ ಗೌರಿ ಸ್ವಾಗತಿಸಿದರು. ಚಿತ್ರಾಶ್ರೀ ಕಾರ್ಯಕ್ರಮ ನಿರೂಪಿಸಿದರು. ರಕ್ಷಿತಾ ವಂದಿಸಿದರು.



ವಿಜಯ ಕರ್ನಾಟಕ ಶುಕ್ರವಾರ,26 ಜುಲೈ 2024, ಮಂಗಳೂರು

## ರಾಷ್ಟ್ರಮಟ್ಟದ ಖೋಖೋ ಪಂದ್ಯಾಟ

# ಬಡಗ ಎಕ್ಕಾರು ಪ್ರೌಢಶಾಲೆ ರನ್ನರ್ ಅಪ್




■ **ವಿಕ ಸುದ್ದಿಲೋಕ** ಬಜಪೆ

ದಕ್ಷಿಣ ಭಾರತ ವಲಯ ತಂಡವನ್ನು ಪ್ರತಿನಿಧಿಸಿದ್ದ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಬಾಲಕಿಯರ ತಂಡ ಚೆನ್ನೈನಲ್ಲಿ ಗುರುವಾರ ನಡೆದ ಎಚ್‌ಸಿಎಲ್ ಫೌಂಡೇಶನ್ ಆಯೋಜಿಸಿದ ಸ್ಪೋರ್ಟ್ಸ್ ಫಾರ್ ಚೇಂಜ್ ರಾಷ್ಟ್ರಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿದೆ.

ಫೈನಲ್ ಪಂದ್ಯದಲ್ಲಿ ಉತ್ತರ ಪ್ರದೇಶ ತಂಡದ ಎದುರು ವೀರೋಚಿತವಾಗಿ ಸೆಣಸಿ ದ್ವಿತೀಯ ಸ್ಥಾನ ಪಡೆದ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲಾ ಬಾಲಕಿಯರು ಉತ್ತರ ಪ್ರದೇಶ ತಂಡದ ವಿರುದ್ಧ ಮೊದಲ ಸುತ್ತಿನ ಪಂದ್ಯದಲ್ಲಿ ಒಂದು ಅಂಕದ ರೋಚಕ ಜಯ ದಾಖಲಿಸಿ ಮುಂದಿನ ಹಂತದಲ್ಲಿ ರಾಜಸ್ಥಾನ ತಂಡದ ವಿರುದ್ಧ ಜಯಗಳಿಸಿ ಸೆಮಿಫೈನಲ್‌ಗೆ ಪ್ರವೇಶಿಸಿತು. ಸೆಮಿಫೈನಲ್‌ನಲ್ಲಿ ಆಂಧ್ರಪ್ರದೇಶ ತಂಡವನ್ನು ಒಂದು ಇನ್ನಿಂಗ್ ಹಾಗೂ ಆರು ಅಂಕಗಳಿಂದ ನಿರಾಯಾಸವಾಗಿ ಮಣಿಸಿ ಫೈನಲ್‌ಗೆ ಪ್ರವೇಶಿಸಿತು. ಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕಿ ವಿದ್ಯಾಲತಾ ತಂಡಕ್ಕೆ ತರಬೇತಿ ನೀಡಿರುತ್ತಾರೆ.

**ಶಾಸಕರಿಂದ ಶ್ಲಾಘನೆ:** ರಾಷ್ಟ್ರಮಟ್ಟದ ಖೋಖೋ ಪಂದ್ಯಾಟದಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯ ಬಾಲಕಿಯರ ತಂಡದ ಸಾಧನೆಗೆ ಶಾಸಕ ಉಮಾನಾಥ ಕೋಟ್ಯಾನ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

## 2. II) ಪ್ರತಿಭಾ ಕಾರಂಜಿಯಲ್ಲಿ ಬಹುಮಾನ ಪಡೆದಿರುವ ವಿವರ:








## 2. III) ವಾಚನಾಲಯದ ಸದ್ಬಳಕೆ:



ನಮ್ಮ ಶಾಲೆಯಲ್ಲಿ ವಿಷಯವಾರು ಆಸಕ್ತಿಕರ, ಆಕರ್ಷಕ ಸಂಪನ್ಮೂಲ ಪುಸ್ತಕಗಳಿದ್ದು ವಿದ್ಯಾರ್ಥಿಗಳು ಶಾಲೆಯ ವಾಚನಾಲಯದ ಅವಧಿಯಲ್ಲಿ ಅವುಗಳನ್ನು ಆಸಕ್ತಿಯಿಂದ ಓದುವುದರ ಜೊತೆಗೆ ಮನೆಗೆ ತೆಗೆದುಕೊಂಡು ಹೋಗಿ ಓದುವ ಸೌಲಭ್ಯವೂ ಲಭ್ಯವಿದ್ದು, ವಿದ್ಯಾರ್ಥಿಗಳು ಅದರ ಸದುಪಯೋಗ ಪಡೆಯುತ್ತಿದ್ದಾರೆ. ಪಾಠಗಳಿಗೆ ಉಪಯುಕ್ತವೆನಿಸಿದ ಸಂಪನ್ಮೂಲ ಪುಸ್ತಕಗಳನ್ನು ಶಿಕ್ಷಕರು ಓದುತ್ತಾರೆ, ಶಾಲೆಯ ಪ್ರಾರ್ಥನಾ ಅವಧಿಯಲ್ಲಿ ಪುಸ್ತಕ ಪರಿಚಯ ಮಾಡುವ ಪರಿಪಾಠವಿದ್ದು ವಿದ್ಯಾರ್ಥಿಗಳು ದಿನಕ್ಕೆ ಒಂದು ಪುಸ್ತಕ ಪರಿಚಯಿಸುತ್ತಾರೆ.

## 1) iv.ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನಿತರಾದ ನಮ್ಮ ವಿದ್ಯಾರ್ಥಿಗಳ ವಿವರ:







ನಾಡಪ್ರಭು ಕೆಂಪೇಗೌಡರ ಸಾಧನೆಗಳ ಸಂಸ್ಮರಣೆಯ ಅಂಗವಾಗಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವತಿಯಿಂದ ನಡೆಸಲಾದ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಗಳಿಸಿದ ಅಪ್ಸಾನ ಬಾನು.

ಮಾರ್ಗದರ್ಶಿ ಶಿಕ್ಷಕರು ; ಶ್ರೀಮತಿ ಚಿತ್ರಾಶ್ರೀ ಕೆ.ಎಸ್ ಹಾಗೂ ಶ್ರೀಮತಿ ವಿದ್ಯಾಗೌರಿ ಎಂ.ಕೆ.






## 2.iv) ರಸಪ್ರಶ್ನೆ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ:




ಮಂಗಳೂರಿನ ಪ್ರತಿಷ್ಠಿತ ರಸಪ್ರಶ್ನೆ ಸಂಸ್ಥೆಯಾದ **Mangalore Quizzing Foudation (R.)** ಇವರು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಜ್ಯಮಟ್ಟದ ರಸಪ್ರಶ್ನೆ ಆಯೋಜಿಸಿದ್ದು ( ದಿನಾಂಕ: **13/08/2023)** ಇದರಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳಾದ ತುಷಾರ್, ಮೊಹಮದ್ ರೈಹಾನ್, ಕಶ್ಯಪ್, ಸ್ವಸ್ತಿಕ್, ಪೂರ್ಣೇಶ್ ಹಾಗೂ ಯಶಸ್ ಪಾಲ್ಗೊಂಡಿರುತ್ತರೆ.

ತಾಲೂಕು ಹಂತದ **RBI Quiz** ನಲ್ಲಿ ಭಾಗವಹಿಸುತ್ತಿರುವ ನಮ್ಮ ಶಾಲೆಯ ವಿದ್ಯಾರ್ಥಿಗಳಾದ ಪೂರ್ಣೇಶ್ ಹಾಗೂ ಯಶಸ್, 10ನೇ ತರಗತಿ.



2.

## v) ಇಕೋ ಕ್ಲಬ್ / ವಿಜ್ಞಾನ ಕ್ಲಬ್ ಚಟುವಟಿಕೆಗಳು:

ವಿದ್ಯಾರ್ಥಿಗಳಲ್ಲಿ ಎಲೇಯ ವಯಸಿನಿಂದಲೇ ಪರಿಸರದ ಬಗೆಗೆ ಪ್ರೀತಿ ಹಾಗೂ ಕಾಳಜಿ ಬೆಳೆಸುವಂತೆ ಚಟುವಟಿಕೆಗಳನ್ನು ಯೋಜಿಸಿ ಕಾರ್ಯರೂಪಕ್ಕೆ ತರುತ್ತಿರುವ ನಮ್ಮ ಶಾಲೆಯ ವನಸಿರಿ ಇಕೋ ಕ್ಲಬ್ ಪ್ರತಿವರ್ಷವೂ ವಿದ್ಯಾರ್ಥಿಗಳಿಗೆ ವನಮಹೋತ್ಸವ ಹಾಗೂ ಪರಿಸರ ದಿನಾಚರಣೆಗಳಂದು ಶಾಲೆಯಲ್ಲಿ ಹಾಗೂ ಮನೆಯ ಸುತ್ತಮುತ್ತಲೂ ಗಿಡಮರಗಳನ್ನು ಬೆಳೆಸುವ ಪ್ರೇರಣೆ ನೀಡುತ್ತಿದೆ.

ಸ್ವಚ್ಛ ಪರಿಸರ ಹಾಗೂ ಶುದ್ಧ ಗಾಳಿ ಪ್ರತಿಯೊಬ್ಬರ ಅವಸ್ಯಕತೆಯಾಗಿರುವುದನ್ನು ಹಾಗೂ ಭವಿಷ್ಯದ ಪರಿಸರ ಇಂದಿನ ನಮ್ಮ ಪರಿರಸದ ಬಗೆಗಿನ ಕಾಳಜಿಯ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಡಲಾಗುತ್ತಿದೆ






ವಿದ್ಯಾರ್ಥಿಗಳು ತಾವು ಬಳಸಿದ ಹಣ್ಣುಗಳ ಬೀಜಗಳನ್ನು ಸಂಗ್ರಹಿಸಿ ಒಣಗಿಸಿ ಮಣ್ಣಿನ ಮಿಶ್ರಣ ಮಾಡಿ ಬೀಜದ ಉಂಡೆಗಳನ್ನು ಬೇಸಿಗೆಯಲ್ಲಿ ತಯಾರಿಸಿ ಮಳೆಗಾಲದಲ್ಲಿ ಸಮೀಪದ ಕಾಡುಗಳಿಗೆ ಬಿತ್ತನೆ ಮಾಡುವ ಕಾರ್ಯ ಗ್ರಾಮ ಅರಣ್ಯ ಸಮಿತಿ ಹಾಗೂ ಅರಣ್ಯ ಇಲಾಖೆ ಸಹಕಾರದಿಂದ ನಡೆಯುತ್ತಿದೆ.

ಮಾರ್ಗದರ್ಶಿ ಶಿಕ್ಷಕರು : ಶ್ರೀಮತಿ ರಮ್ಯ ಕೆ



# ದ.ಕ.ಜಿ.ಪಂ.ಸರಕಾರಿ ಪ್ರೌಢಶಾಲೆ, ಬಡಗ ಎಕ್ಕಾರು, ಮಂಗಳೂರು ಉತ್ತರ, ದ.ಕ. ಜಿಲ್ಲೆ

# ವನಸಿರಿ ಇಕೋ ಕ್ಲಬ್











wipro earthian

Sustainability Education Program
for Schools

Organised by
wipro foundation Bengaluru
C.P.R. Environmental Education Centre, Chennai

EARTHIAN-STATE WINNER

This is to Certify that
Ramya K
from Govt. High School Badaga yekkar Mangalore North
has been selected as a State Winner in the
Wipro earthian 2021-22 schools program. Thank you for
your Project Submission. We value your contribution.

Dr. P. Sudhakar
Director
C.P.R. Environmental Education Centre

Anurag Behar
Cheif Sustainability officer
Wipro




( From left)Wipro Eartian- State Level Winner: Mrs. Ramya K., Eco Club Coordinator, G.H.S. Badaga Yekkar with HM Mrs IndiraN. Rao and Drawing Teacher Miss Jayanthi M. & members of Eco Club

## 2. vi) ಶಾಲಾ ಕ್ಯಾಬಿನೆಟ್ ರಚನೆ ಹಾಗೂ ಯಶಸ್ವೀ ಕಾರ್ಯ ನಿರ್ವಹಿಸುವಿಕೆ:

ನಮ್ಮ ಶಾಲೆಯಲ್ಲಿ EVM ಆಪ್ ಬಳಸಿ ಈ ಬಾರಿ ಶಾಲಾ ವಿದ್ಯಾರ್ಥಿಗಳ ಅಧ್ಯಕ್ಷರ ಚುನಾವಣೆ ನಡೆಸಲಾಗಿದ್ದು ನೈಜ ಜೀವನದಲ್ಲಿ ನಡೆಯುವ ಚುನಾವಣಾ ಅನುಭವವನ್ನು ವಿದ್ಯಾರ್ಥಿಗಳಿಗೆ ಕಟ್ಟಿಕೊಡಲಾಗಿದೆ. ವಿದ್ಯಾರ್ಥಿಗಳು ಎರಡು ಮೊಬೈಲ್ ಬಳಸಿ ಮಲಡಿದ ಈ ಚುನಾವಣೆಯಲ್ಲಿ Control Unit, Ballot Unit ಹಾಗೂ ಮತ ಎಣಿಕೆಯ ವಿಧಾನಗಳನ್ನು ಅರಿತುಕೊಳ್ಳಲು ಅವಕಾಶವಾಗಿದ್ದು ಬಹಳ ಸಂತೋಷದಿಂದ ತಮ್ಮ ಗುರುತಿನ ಚೀಟಿ ತೋರಿಸಿ ಮತ ಚಲಾವಣೆಯಲ್ಲಿ ಪಾಲ್ಗೊಂಡರು.

### ಶಾಲಾ ಮಂತ್ರಿಮಂಡಲ : 2024

ಶಾಲಾ ನಾಯಕ - ಮನ್ವಿತ್ ಎಸ್ ಅಮೀನ್ (10Th)
ಉಪ ನಾಯಕಿ- ದರ್ಶಿನಿ (10Th)
ಉಪ ನಾಯಕ- ಸೃಜನ್ ಶೆಟ್ಟಿ (9th)
ಸಭಾಪತಿ- ಚಿರಾಗ್ ಆರ್ ಶೆಟ್ಟಿಗಾರ್ (10Th)
ಉಪ ಸಭಾಪತಿ- ವಿನೀತ್ ಸುವರ್ಣ (9th)
ಗೃಹ ಮಂತ್ರಿ - ಪ್ರಥಮ್ ಆರ್ ಶೆಟ್ಟಿ (10Th)
ಉಪ- ಸೃಜನ್ ಅಮೀನ್ (9th)
ಶಿಕ್ಷಣ & ವಾರ್ತಾ ಮಂತ್ರಿ- ಅಮರೇಶ್ (10Th)
ಉಪ ಮಂತ್ರಿ- ಸೃಷ್ಟಿ (9th) ಮೌಲ್ಯ
ಆರೋಗ್ಯ ಮಂತ್ರಿ- ದೀಕ್ಷಾ (10Th)
ಉಪ ಮಂತ್ರಿ – ಪ್ರಕೃತಿ (9th) & ಭವಿತ್ (8th)
ಆಹಾರ ಮಂತ್ರಿ- ಸಾತ್ವಿಕ್ ರೈ (10Th)
ಉಪ ಮಂತ್ರಿ - ಪೃಥ್ವಿನ್ ಶೆಟ್ಟಿ (9th)
ಕ್ರೀಡಾ ಮಂತ್ರಿ- ಸ್ಮಿತ (10Th)
ಉಪ ಮಂತ್ರಿ - ಭೂಮಿಕ(9th)
ನೀರಾವರಿ ಮಂತ್ರಿ- ಕಾರ್ತಿಕ್ (10Th)
ಉಪ ಮಂತ್ರಿ - ಕೀರ್ತನ್ (9th)

ತೋಟಗಾರಿಕೆ- ತುಷಾರ್ (10Th)
ಉಪ ಮಂತ್ರಿ – ಅನುಷ್ (9th)

ಸಾಂಸ್ಕೃತಿಕ ಮಂತ್ರಿ- ಅದಿತಿ (10Th)
ಉಪ ಮಂತ್ರಿ – ಛಾಯಾಶ್ರೀ (9th)

ಸ್ವಚ್ಛತಾ ಮಂತ್ರಿ- ಹರ್ಷಿತ (10Th)
ಉಪ- ಅಂಕಿತ (9th)

ನಮ್ಮ ಶಾಲೆಯ ಚುನಾವಣಾ ಪ್ರಕ್ರಿಯೆಯ ವೀಡಿಯೋ ಲಿಂಕ್:

https://youtu.be/RhfeHeTbj5M?si=HR3KIt6-hkpQrtO-




GHS BADAGA YEKKAR "School Election 2024-25"





ಉದಯವಾಣಿ 4/4

**ಶಾಲೆಗಳಲ್ಲಿ ವಿದ್ಯಾರ್ಥಿ ನಾಯಕನ ಆಯ್ಕೆಗೂ ನೈಜ ಚುನಾವಣೆ ಮಾದರಿ**

**ವೋಟಿಂಗ್ ಮೆಷಿನ್ ಆ್ಯಪ್ ಬಳಸಿ ಶಾಲಾ ನಾಯಕನ ಆಯ್ಕೆ**

**ಬಜಪೆ, ಜೂ. 9:** ಲೋಕಸಭಾ ಚುನಾವಣೆ ಮುಗಿದು, ಫಲಿತಾಂಶ ಬಂದಾಯಿತು. ಇನ್ನೂ ಶಾಲಾ ಸಂಸತ್ತಿನ ಹಾಗೂ ನಾಯಕನ ಚುನಾವಣೆ ಶುರುವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಮತದಾನದ ಮಾಡುವ ಹಕ್ಕಿಲ್ಲದ 18ರ ವಯಸ್ಸಿನ ಕೆಳಗಿನ ಮಕ್ಕಳಿಗೆ ಶಾಲಾ ಸಂಸತ್ತಿನ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಖುಷಿಕೊಟ್ಟಿದೆ.

ಭವ್ಯ ಭಾರತದ ಭವಿಷ್ಯತ್ತನ್ನು ರೂಪಿಸುವಂತಹ ವಿದ್ಯಾರ್ಥಿಗಳು ಪ್ರೌಢಶಾಲಾ ಹಂತದಲ್ಲಿಯೇ ಚುನಾವಣಾ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ಪಡೆಯಬೇಕೆನ್ನುವ ದೃಷ್ಟಿಯಿಂದ ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರಿನಲ್ಲಿ ಜೂ. 8ರಂದು ಶಾಲಾ ಸಂಸತ್ತಿನ ನಾಯಕನ ಆಯ್ಕೆಗೆ ಚುನಾವಣೆಯನ್ನು ನಡೆಸಲಾಗಿದೆ. ಸರಕಾರಿ ಶಾಲೆಯಾದರೂ ನಾವೇನೂ ಹಿಂದಿಲ್ಲ ಎನ್ನುವ ರೀತಿಯಲ್ಲಿ ನಡೆದಿದೆ.

ಒಟ್ಟು ಆರು ವಿದ್ಯಾರ್ಥಿಗಳು ನಾಮಪತ್ರವನ್ನು ಸಲ್ಲಿಸಿದ್ದರು. ಅದರಲ್ಲಿ ಒಬ್ಬ ವಿದ್ಯಾರ್ಥಿ ತನ್ನ ನಾಮಪತ್ರವನ್ನು ಹಿಂದೆ ಪಡೆದ ಕಾರಣ ಚುನಾವಣಾ ಕಣದಲ್ಲಿ ಒಟ್ಟು ಐದು ಮಂದಿ ವಿದ್ಯಾರ್ಥಿಗಳು ನಾಯಕ ಸ್ಥಾನಕ್ಕೆ ಸ್ಪರ್ಧಿಸಿದ್ದರು.

**ಶಾಲಾ ಶಿಕ್ಷಕರೇ ಇಲ್ಲಿ ಚುನಾವಣಾ ಅಧಿಕಾರಿಗಳು**

ಶಾಲಾ ಮುಖ್ಯೋಪಾಧ್ಯಾಯಿನಿ ಇಂದಿರಾ ಎನ್. ರಾವ್ ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ವಿದ್ಯಾರ್ಥಿಗಳಿಗೆ ಗುರುತು ಚೀಟಿಗಳಾಗಿ ಆಧಾರ್ ಕಾರ್ಡ್ ಮತ್ತು ಶಾಲಾ ಐಡಿಯನ್ನು ಪರಿಗಣಿಸಲಾಯಿತು. ಚುನಾವಣೆಯನ್ನು ವೋಟಿಂಗ್ ಮೆಷಿನ್ ಆ್ಯಪ್ ಬಳಸುವ ಮೂಲಕ ನಡೆಸಲಾಯಿತು. ಇದಕ್ಕಾಗಿ ಎರಡು ಮೊಬೈಲ್‌ಗಳನ್ನು ಬಳಸಲಾಗಿದ್ದು, ಅವುಗಳಲ್ಲಿ ಒಂದನ್ನು ಕಂಟ್ರೋಲ್ ಯೂನಿಟ್ ಹಾಗೂ ಮತ್ತೊಂದನ್ನು ಬ್ಯಾಲೆಟ್ ಯೂನಿಟ್‌ಗಳಾಗಿ ಬಳಸಲಾಯಿತು. ಶಾಲೆಯ ಹಿರಿಯ ಶಿಕ್ಷಕಿ ಪೂರ್ಣಿಮಾ ಅಧ್ಯಕ್ಷ ಅಧಿಕಾರಿಯ (ಪ್ರಿಸೈಡಿಂಗ್ ಆಫೀಸರ್) ಕರ್ತವ್ಯವನ್ನು ನಿರ್ವಹಿಸಿದರು. ಶಿಕ್ಷಕಿ ರಾಜಶ್ರೀ ಎಪಿಆರ್‌ಒ ಕರ್ತವ್ಯವನ್ನು ನಿರ್ವಹಿಸಿದರು.

ಶಿಕ್ಷಕಿ ವಿದ್ಯಾಗೌರಿ ಪಿಒ 1 ಮತ್ತು ರಮ್ಯಾ, ಜಯಂತಿ ಪಿಒ 2 ಜವಾಬ್ದಾರಿ ನಿರ್ವಹಿಸಿದರು. ಶಿಕ್ಷಕಿ ಚಿತ್ರಾಶ್ರೀ ಬ್ಯಾಲೆಟ್ ಯೂನಿಟ್ ನ ಕಾರ್ಯವನ್ನು ನಿರ್ವಹಿಸಿದರು. ಶಿಕ್ಷಕಿರಾದ ವಿದ್ಯಾಲತಾ ಮತ್ತು ವಿನ್ನಿ ನಿರ್ಮಲಾ ಶಿಸ್ತು ಪಾಲನಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದರು. ಶಿಕ್ಷಕ ಡಾ। ಅನಿತ್ ಕುಮಾರ್ ಸೆಕ್ಟರ್ ಆಫೀಸರ್ ಜವಾಬ್ದಾರಿಯನ್ನು ನಿರ್ವಹಿಸಿದರು. ಒಟ್ಟು 121 ವಿದ್ಯಾರ್ಥಿಗಳು ಮತದಾನದಲ್ಲಿ ಪಾಲ್ಗೊಂಡಿದ್ದರು. ಹತ್ತನೇ ತರಗತಿಯ ಮನ್ವಿತ್ ಎಸ್. ಅಮೀನ್ 53 ಮತಗಳನ್ನು ಪಡೆದು ಶಾಲಾ ವಿದ್ಯಾರ್ಥಿ ನಾಯಕನಾಗಿ ಆಯ್ಕೆಯಾದರು. 43 ಮತಗಳನ್ನು ಪಡೆದು ದರ್ಶಿನಿಯವರು ಶಾಲಾ ಉಪ ನಾಯಕಿಯಾಗಿ ಆಯ್ಕೆಯಾದರು.

ಆಧುನಿಕ ಮತಯಂತ್ರದ ಬಗ್ಗೆ ವಿಶ್ವಾಸ, ತಿಳುವಳಿಕೆ ಹಾಗೂ ಅಭಿಮಾನ ಮೂಡಿಸಿದ ಚುನಾವಣಾ ಪ್ರಕ್ರಿಯೆಯು ಭವಿಷ್ಯದ ಮತದಾರರಾದ ವಿದ್ಯಾರ್ಥಿಗಳ ಮೆಚ್ಚುಗೆ ಪಡೆಯಿತು. ಮೊದಲ ಮತದಾನದ ಅನುಭವ ವಿದ್ಯಾರ್ಥಿಗಳದ್ದಾಯಿತು. ಭಯ ಬಿಟ್ಟು ಮತದಾನ ಮಾಡಲು ಇದು ಒಂದು ಪೂರಕವಾಯಿತು.


School Cabinet Election- 2024
ಂಗಡಿಗರ ಸಹಾಯದಿಂದ ಮತ ಚಲಾವಣ
BADAGA YEKKAR "School
n 2024-25"
...more
chool
ಫಲಿತಾಂಶ ಘೋಷಣೆ
GHS BADAGA YEKKAR "School
ಚುನಾವಣಾ ಅಧಿಕಾರಿಗಳು
ಶ್ರೀಮತಿ ಇಂದಿರಾ ಎನ್ ರಾವ್
ಮುಖ್ಯೋಪಾಧ್ಯಾಯರು
Election officer
BADAGA YEKKAR "Sch
POLLING OFFICER 1

## ಮಕ್ಕಳ ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವಿಕೆ:

**ಎಕ್ಕಾರು ಗ್ರಾಮ ಪಂಚಾಯತ್ ವತಿಯಿಂದ ನಡೆದ ಗ್ರಾಮಸಭೆಯಲ್ಲಿ ಭಾಗವಹಿಸಿದ ನಮ್ಮ ವಿದ್ಯಾರ್ಥಿಗಳು ಶಾಲೆಗೆಸಂಬಂಧಿಸಿದಂತೆ ಗ್ರಾಮ ಪಂಚಾಯತ್ ನೆರವು ಬಯಸುವ ವಿಚಾರಗಳನ್ನು ಮುನ್ನಲೆಗೆ ತರುವ ಪ್ರಶ್ನೆಗಳನ್ನು ಕೇಳಿದರು. ಶಾಲೆಯ ರಸ್ತೆ ಸಂಪರ್ಕ ಕಲ್ಪಿಸುವ ಬಗ್ಗೆ ಹಾಗೂ ರಸ್ತೆಯ ಬದಿಯಲ್ಲಿ ವಾಹನಗಳಿಗೆ ನಿಧಾನವಾಗಿ ಚಲಿಸುವ ಸೂಚನಾ ಫಲಕ ಅಳವಡಿಸುವ ಅಗತ್ಯತೆಯನ್ನು ಕುರಿತು ಚರ್ಚಿಸಿದರು.**

**ಆರೋಗ್ಯ ಇಲಾಖೆ, ಗಾಮದ ಗ್ರಂಥಾಲಯದ ಗ್ರಂಥ ಪಾಲಕರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ಲಭಿಸಿತು. ಭಾವೀ ಪ್ರಜೆಗಳಾದ ವಿದ್ಯಾರ್ಥಿಗಳಿಗೆ ನಾಯಕತ್ವಗುಣ ಬೆಳೆಸಿಕೊಳ್ಳಲು ಇದು ಸೂಕ್ತ ವೇದಿಕೆಯಾಗಿತ್ತು.**







2021ರಲ್ಲಿ ನಮ್ಮ ಶಾಲೆಯ ಮತದಾರರ ಸಾಕ್ಷರತಾ ಸಂಘಕ್ಕೆ ರಾಜ್ಯಮಟ್ಟದ **BEST ELECTORAL LITERACY CLUB** ಎಂಬ ಪ್ರಶಸ್ತಿ ಲಭಿಸಿದೆ. ನೋಡಲ್ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶಾಲೆಯಲ್ಲಿ ನಡೆಸಿದ ಮತದಾರರ ಜಾಗೃತಿ ಕಾರ್ಯಕ್ರಮಗಳ ಆಧಾರದಲ್ಲಿ ಈ ಪ್ರಶಸ್ತಿ ಲಭಿಸಿದೆ.

ಮಾರ್ಗದರ್ಶಿ ಶಿಕ್ಷಕರು : ಶ್ರೀಮತಿ ಚೆತ್ರಾಶ್ರೀ ಕೆ.ಎಸ್.

## ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗೆ ಆಯ್ಕೆ :

**ನಮ್ಮ ಶಾಲೆಯ ಇಬ್ಬರು ವಿದ್ಯಾರ್ಥಿನಿಯರು 2023-24ನೇ ಸಾಲಿನ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗೆ ಆಯ್ಕೆಯಾಗಿದ್ದು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಶಂಸೆಗೆ ಪಾತ್ರರಾಗಿರುತ್ತಾರೆ.**

**ತಾಲೂಕು ಹಂತದಿಂದ ಜಿಲ್ಲಾ ಹಂತಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರು:**

**ವಿವಿನಾ ಫ್ರಾಂಕೋ & ಕೃತಿ ಬಿ. ಕೋಟ್ಯಾನ್**

**ಮಾರ್ಗದರ್ಶಿ ಶಿಕ್ಷಕರು : ಶ್ರೀಮತಿ ಚಿತ್ರಾಶ್ರೀ ಕೆ.ಎಸ್ ಮತ್ತು ಶ್ರೀಮತಿ ಜ್ಯೋತಿ ಬಿ.**






## 2. VII) ಹೊರ ಸಂಚಾರ ಮತ್ತು ಪ್ರವಾಸಗಳು:

ವಿದ್ಯಾರ್ಥಿಗಳಲ್ಲಿ ವಿವಿಧ ಐತಿಹಾಸಿಕ, ವೈಜ್ಞಾನಿಕ ಹಾಗೂ ವಿಶಿಷ್ಟ ಸ್ಥಳಗಳ ಬಗ್ಗೆ ಜ್ಞಾನದಾಹ ಮೂಡಿಸುವ ಸದುದ್ದೇಶದಿಂದ ನಮ್ಮ ಶಾಲೆಯಲ್ಲಿ ಪ್ರತಿ ವರ್ಷ ಶೈಕ್ಷಣಿಕ ಹೊರ ಸಂಚಾರ /






ಪ್ರವಾಸ ಆಯೋಜಿಸಲಾಗುತ್ತಿದೆ.



## 2. Viii) ಗಣಕಯಂತ್ರ ಬೋಧನೆ :

ನಮ್ಮ ಶಾಲೆಯು 11 ಗಣಕಯಂತ್ರಗಳನ್ನೊಳಗೊಂಡ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹೊಂದಿದ್ದು ICT ತರಬೇತಿ ಪಡೆದಿರುವ ಶಿಕ್ಷಕರು ಪಠ್ಯ ಬೋಧನೆಗೆ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಜೊತೆಗೆ ಗಣಕಯಂತ್ರದ ಬಗೆಗೆ ಕಲಿಕೆಯಲ್ಲೂ ವಿದ್ಯಾರ್ಥಿಗಳಿಗೆ ಸಹಕರಿಸುತ್ತಾರೆ. ಶಾಲಾ ವೇಳಾಪಟ್ಟಿಯಲ್ಲಿ ಗಣಕಯಂತ್ರ ತರಗತಿಗಳಿಗೆ 2 ಅವಧಿಗಳು ಪ್ರತಿ ತರಗತಿಗೆ ನಿಗದಿಯಾಗಿದ್ದು ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಕೆಯಲ್ಲಿ ತೊಡಗಿದ್ದಾರೆ.






## ವಿಭಾಗ 3 : ಬಾಂಧವ್ಯ

3. i) ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ನಡುವಿನ ಬಾಂಧ್ಯವ್ಯ

ಶಾಲೆಯ ಕಟ್ಟಡದೊಳಗೆ ಕಲಿಕೆಗೆ ಜೀವ ತುಂಬುವ ಶಿಕ್ಷಕರ ಬಗ್ಗೆ ಅಪಾರ ಕಾಳಜಿ ಹಾಗೂ ಪ್ರೀತಿಯಿಂದ ವರ್ತಿಸುವ ಮುಖ್ಯ ಶಿಕ್ಷಕರಾದ ಶ್ರೀಮತಿ ಇಂದಿರಾ ಎನ್ ರಾವ್ ಇವರು ಕಲಿಕೆಗೆ ಪೂರಕವಾದ ವಾತಾವರಣ ಶಾಲೆಯಲ್ಲಿರುವಂತೆ ಶ್ರಮವಹಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಿಕ್ಷಕರೆಲ್ಲರೂ ಪರಸ್ಪರ ಸಹಕಾರ ಹಾಗೂ ಸಮಭಾವದಿಂದ ಶಾಲೆಯ ಶ್ರೇಯೋಭಿವೃದ್ಧಿಗೆ ಕೈಜೋಡಿಸಿ ಶ್ರಮಿಸುತ್ತಿರುವುದರಿಂದಲೇ ಇಂದು ಶಾಲೆ ಪಠ್ಯ ಹಾಗೂ ಪಠ್ಯ ಪೂರಕ ಚಟುವಟಿಕೆಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ಸಾಧ್ಯವಾಗಿದೆ. ಶಾಲಾ ಕಾರ್ಯಕ್ರಮಗಳು, ಸಭೆ-ಸಮಾರಂಭಗಳ ಆಯೋಜನೆಯಲ್ಲಿ ಒಂದು ತಂಡವಾಗಿ ದುಡಿಯುವ ಸಾಮರ್ಥ್ಯವೇ ಶಾಲೆಯ ಯಶಸ್ಸಿನ ಸೂತ್ರವಾಗಿದೆ.





## 3. ii) ಶಾಲೆ ಮತ್ತು ಎಸ್ ಡಿ ಎಂ ಸಿ ನಡುವಿನ ಬಾಂಧವ್ಯ:

ಶಾಲೆಯ ಎಲ್ಲಾ ಕಾರ್ಯಗಳಲ್ಲಿ ಆಸಕ್ತಿ ವಹಿಸುವ, ಸರ್ವಾಂಗೀಣ ಪ್ರಗತಿಗಾಗಿ ಕೈಜೋಡಿಸಿ ದುಡಿಯುವ ಉತ್ಸಾಹೀ ತಂಡ ನಮ್ಮ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ. ಪ್ರತಿ ಸಭೆಯಲ್ಲೂ ಉಪಯುಕ್ತ ಸಲಹೆ ಸೂಚನೆಗಳನ್ನಿತ್ತು ಸಾಧನೆಗಳಿಗೆ ಸಂಭ್ರಮಿಸುವವರು ಜೊತೆಗಿರುವುದರಿಂದ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದ ಸದಾ ಶಾಲೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಲು ಉತ್ಸಾಃ ತೋರುವಂತಾಗಿದೆ.




## 3 iii ಶಾಲೆ ಮತ್ತು ಸಮುದಾಯದ ನಡುವೆ ಬಾಂಧವ್ಯ:

ಸಮುದಾಯದ ಪ್ರೀತಿ- ವಿಶ್ವಾಸ ಹಾಗೂ ಸದಾಶಯ ತುಂಬಿದ ಸಹಕಾರ ಮನೋಭಾವದಿಂದ ಕೇವಲ 11ವಿದ್ಯಾರ್ಥಿಗಳು ಹಾಗೂ ಸ್ವಂತ ಕಟ್ಟಡವಿಲ್ಲದೇ ಆರಂಭವಾದ ಈ ಶಾಲೆಯು ಇಂದು 130 ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವ ಸಶಕ್ತ ಸಂಸ್ತೇಯಾಗಿ ಬೆಳೆದಿದೆ. ಕನ್ನಡಹಾಗೂ ಆಂಗ್ಲ ಮಾಧ್ಯಮಗಳಲ್ಲಿ ಬೋಧಿಸಲು ಶಿಕ್ಷಕರಿಗೆ ಪ್ರೇರಣೆ ನೀಡಿ ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿದ್ದ ತಮ್ಮ ಮಕ್ಕಳನ್ನು ಸರಕಾರಿ ಶಾಲೆ ನಮ್ಮೂರಿನ ಶಾಲೆ ಎಂಬ ಪ್ರೀತಿಯಿಂದ ಇಲ್ಲಿಗೆ ಸೇರಿಸಿ ಶಾಲೆಯ ದಾಖಲಾತಿ ಹೆಚ್ಚಿಸಿದ ಪೋಷಕರ ನೆರವಿಗೆ ನಿಂತ ಸಮುದಾಯ ಶಾಲೆಯ ಕಾರ್ಯಕ್ರಮಗಳಿಗೆ ಮಾತ್ರವಲ್ಲ ಅಗತ್ಯವಿದ್ದ ಸೌಕರ್ಯ ಒದಗಿಸಲು ಶಕ್ತಿಮೀರಿ ಶ್ರಮಿಸಿದೆ.

/






**ಶಾಲೆಯ ಕ್ರೀಡಾಪಟುಗಳಿಗೆ ಜೆರ್ಸಿ ನೀಡಿ ಉತ್ತೇಜಿಸಿದ ದುರ್ಗಾ ಕಲ್ಚುರಲ್ ಆಂಡ್ ಕ್ರಿಕೆಟರ್ಸ್ ಕ್ಲಬ್, ಎಕ್ಕಾರು.**




**ಶಾಲೆಗೆ ಉಚಿತ ನೋಟಿಸ್ ಬೋರ್ಡ್ ರಚಿಸಿಕೊಟ್ಟ ದಾನಿಗಳು**












## ವಿದ್ಯಾರ್ಥಿಗಳಿಗೆ ಗುರುತು ಚೀಟಿ ವಿತರಣೆ

ಬಜಪೆ: ಇಲ್ಲಿ ಬಡಗ ಎಕ್ಕಾರು ಸರ್ಕಾರಿ ಪ್ರೌಢಶಾಲೆಗೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ದಾಖಲಾದ ಸುಮಾರು 60 ವಿದ್ಯಾರ್ಥಿಗಳಿಗೆ ಡಿಸಿಸಿ ಕ್ಲಬ್ ಎಕ್ಕಾರು ವತಿಯಿಂದ ಗುರುತಿನ ಚೀಟಿ ವಿತರಿಸಲಾಯಿತು.

ಡಿಸಿಸಿ ಕ್ಲಬ್ ಅಧ್ಯಕ್ಷ ಪ್ರಶಾಂತ್ ಆಚಾರ್ಯ ಗುರುತುಚೀಟಿ ವಿತರಿಸಿದರು.

ಪ್ರೌಢಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಪೂರ್ಣಿಮಾ ಎಚ್.ಎಂ. ಅವರು ಕ್ಲಬ್‌ನ ಸೇವೆಯನ್ನು ಶ್ಲಾಘಿಸಿದರು.


ಎಸ್‌ಡಿಎಂಸಿ ಅಧ್ಯಕ್ಷ ಸುದೀಪ್ ಎಸ್.ಅಮೀನ್, ಶಿಕ್ಷಕಿಯರಾದ ವಿದ್ಯಾಲತಾ, ರಮ್ಯಾ, ವಿದ್ಯಾ ಗೌರಿ, ವಿನ್ನಿ ನಿರ್ಮಲ ಡಿಸೋಜ, ಜಯಂತಿ, ಅನಿತ್ ಕುಮಾರ್ ಭಾಗವಹಿಸಿದ್ದರು. ಚಿತ್ರಶ್ರೀ ಕೆ. ನಿರೂಪಿಸಿದರು.

ಬಜಪೆ ಸಮೀಪದ ಬಡಗ ಎಕ್ಕಾರು ಸರ್ಕಾರಿ ಪ್ರೌಢಶಾಲೆಯ 60 ವಿದ್ಯಾರ್ಥಿಗಳಿಗೆ ಡಿಸಿಸಿ ಕ್ಲಬ್ ಎಕ್ಕಾರು ವತಿಯಿಂದ ಗುರುತಿನ ಚೀಟಿ ವಿತರಿಸಲಾಯಿತು

## 3. iv. ಶಿಕ್ಷಕರು ಮತ್ತು ಮಕ್ಕಳ ನಡುವೆ ಬಾಂಧವ್ಯ

ಶಾಲೆಯ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿ, ಜ್ಞಾನದ ಹಸಿವನ್ನು ಉದ್ದೀಪಿಸಿ ಸಾಧನೆಯ ಶಿಖರವೇರುವಂತೆ ಸಮುದಾಯಕ್ಕೆ ಸಹಕಾರಿಯಾಗಿರುವಂತೆ ವಿದ್ಯಾರ್ಥಿಗಳನ್ನು ಬೆಳೆಸುವುದು. ಈ ಜ್ಞಾನಯಜ್ಞದಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಕಾಳಜಿ ಹಾಗೂ ಪ್ರೇರಣೆ ನೀಡುತ್ತಾ ಬೆಳೆಸುವವರಾಗಿರುವುದು ನಮ್ಮ ಶಾಲೆಯ ಸುಯೋಗ. ವಿದ್ಯಾರ್ಥಿಗಳನ್ನು ಪಠ್ಯ ಹಾಗೂ ಪಠ್ಯ ಪೂರಕ ಚಟುವಟಿಕೆಗಳಲ್ಲಿ ಎಲ್ಲರೂ ಮುನ್ನಡೆಸುತ್ತಾ ಬೆಳೆಸುವ ಕಾರಣ ವಿದ್ಯಾರ್ಥಿಗಳೂ ತಾವು ಕಲಿತ ಶಾಲೆಯ ಬಗೆಗೆ ಅಪಾರ ಪ್ರೀತಿಯನ್ನಿಟ್ಟುಕೊಂಡು, ಶಿಕ್ಷಕರ ಜೊತೆ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದ್ದಾರೆ.


ಬಡಗ ಎಕ್ಕಾರು ಸರಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಐಡಿ ಕಾರ್ಡ್ ವಿತರಣೆ






## ಯಕ್ಷ ಶಿಕ್ಷಣ :

**ಯಕ್ಷಗಾನವು ನೃತ್ಯ ,ಹಾಡುಗಾರಿಕೆ, ಮಾತುಗಾರಿಕೆ, ವೇಷ ಭೂಷಣಗಳನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಯಕ್ಷಗಾನ ಕಲಿಕೆ ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ, ಪುರಾಣ ಜ್ಞಾನ, ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿ . ಯಕ್ಷಗಾನ ಕಲಿಕೆಯಲ್ಲಿ ತೊಡಗಿಸಿ ಕೊಂಡ ವಿದ್ಯಾರ್ಥಿಗಳು ಶೈಕ್ಷಣಿಕವಾಗಿಯು ಉತ್ತಮ ಫಲಿತಾಂಶ ಪಡೆಯುತ್ತಿರುವುದು ಗಮನಾರ್ಹ. ನಮ್ಮ ನಾಡಿನ ಹೆಮ್ಮೆಯ ಯಕ್ಷಗಾನ ಕಲೆಯನ್ನು ಎಳೆಯರು ಕಲಿತು ಸಂಸ್ಕೃತಿ, ಸಂವರ್ಧನೆಗೆ ಮಹತ್ವದ ಕೊಡುಗೆ ನೀಡಬೇಕೆಂಬ ಸದಾಶಯದೊಂದಿಗೆ ಪ್ರಾರಂಭಿಸಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಇವರ ಪರಿಶ್ರಮ ಅನನ್ಯ.**




ಉದಯವಾಣಿ

3/4

# ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಮೌಲ್ಯ ವೃದ್ಧಿಗೆ ಯಕ್ಷ ಶಿಕ್ಷಣ ಸಹಕಾರಿ

## 'ಯಕ್ಷ ಶಿಕ್ಷಣ' ಕಾರ್ಯಕ್ರಮದ ಉದ್ಘಾಟನೆ ಸಮಾರಂಭದಲ್ಲಿ ಗಿರೀಶ್ ಶೆಟ್ಟಿ



**ಬಜಪೆ, ಜೂ. 17:** ಯಕ್ಷ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವುದರೊಂದಿಗೆ ಜೀವನ ಶಿಸ್ತಿನ ಅರಿವನ್ನು ಮೂಡಿಸುತ್ತದೆ. ಸಮಾಜ ಮುಖಿ ಚಿಂತನೆಯನ್ನು ಬಿತ್ತುತ್ತಾ ತಿಳಿವಳಿಕೆಯನ್ನು ಹೆಚ್ಚಿಸುವ ಮಾಧ್ಯಮವಾಗಿ ಯಕ್ಷಗಾನವು ಒಂದು ರಮ್ಯ ಅದ್ಭುತ ಕಲೆ ಎಂದು ಯಕ್ಷಧ್ರುವ ಪಟ್ಲ ಫೌಂಡೇಶನ್ ಕಟೀಲು -ಎಕ್ಕಾರು ಘಟಕ ಅಧ್ಯಕ್ಷ ಗಿರೀಶ್ ಶೆಟ್ಟಿ ಹೇಳಿದರು.

ಅವರು ಶನಿವಾರ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್, ಮಂಗಳೂರು ಇದರ ವತಿಯಿಂದ ನಡೆಯುವ ಎರಡನೇ ವರ್ಷದ 'ಯಕ್ಷ ಶಿಕ್ಷಣ' ಕಾರ್ಯಕ್ರಮದ ಉದ್ಘಾಟನೆಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದರು.

ಎಕ್ಕಾರು ಬಂಟರ ಸಂಘದ ಅಧ್ಯಕ್ಷ ರತ್ನಾಕರ ಶೆಟ್ಟಿ ಉದ್ಘಾಟನೆ ನೆರವೇರಿಸಿದರು. ಯಕ್ಷ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಯಕ್ಷ ಶಿಕ್ಷಣಕ್ಕೆ ಸಂಬಂಧಿಸಿ ಪುಸ್ತಕ, ಲೇಖನ ಸಾಮಗ್ರಿ ವಿತರಿಸಲಾಯಿತು. 130 ಮಂದಿ ಯಕ್ಷ ಶಿಕ್ಷಣದಲ್ಲಿ ಭಾಗವಹಿಸಿದ್ದರು.


ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಸುದೀಪ್ ಅಮೀನ್, ಎಕ್ಕಾರು ಘಟಕದ ಸಂಚಾಲಕರಾದ ಸತೀಶ್ ಶೆಟ್ಟಿ, ನಿತೇಶ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಭರತೇಶ ಶೆಟ್ಟಿ, ಗ್ರಾ.ಪಂ. ಸದಸ್ಯ ವಿಕ್ರಮ್ ಮಾಡ, ಶಾಲಾ ಮುಖ್ಯೋಪಾಧ್ಯಾಯಿನಿ ಇಂದಿರಾ ಎನ್. ರಾವ್, ನೋಡಲ್ ಶಿಕ್ಷಕ ಡಾ। ಅನಿತ್ ಕುಮಾರ್, ಶಿಕ್ಷಕಿಯರಾದ ಪೂರ್ಣಿಮಾ ಎಚ್.ಎಂ., ರಾಜಶ್ರೀ ಕೆ., ವಿದ್ಯಾಲತಾ, ವಿದ್ಯಾ ಗೌರಿ, ರಮ್ಯಾ, ಜಯಂತಿ, ವಿನ್ನಿ ನಿರ್ಮಲಾ ಡಿ'ಸೋಜಾ, ನಿಶ್ಮಿತಾ, ಹೆತ್ತವರು ಉಪಸ್ಥಿತರಿದ್ದರು.

ರಾಜೇಂದ್ರ ಪ್ರಸಾದ್ ಪ್ರಸ್ತಾವಿಸಿ, ಸ್ವಾಗತಿಸಿದರು. ಶಿಕ್ಷಕಿ ಚಿತ್ರಾಶ್ರೀ ಕಾರ್ಯಕ್ರಮ ನಿರೂಪಿಸಿದರು. ಘಟಕದ ಸಂಚಾಲಕ ನಿತೇಶ್ ಎಕ್ಕಾರು ವಂದಿಸಿದರು.

ಯಕ್ಷ ಶಿಕ್ಷಕ ರಾಮ್ ಪ್ರಕಾಶ್ ಕಲ್ಲೂರಾಯ ವಿದ್ಯಾರ್ಥಿಗಳಿಗೆ ಪ್ರಾರಂಭಿಕ ಹೆಜ್ಜೆಗಳನ್ನ ಕಲಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭ ದಕ್ಷಿಣ ಭಾರತ ವಲಯ ಮಟ್ಟದ ಖೋಖೋ ಪಂದ್ಯಾಟವು ಆಂಧ್ರಪ್ರದೇಶ ವಿಜಯವಾಡದ ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದ್ದು ಅದರಲ್ಲಿ ಪಾಲ್ಗೊಳ್ಳುವ 8 ಮಂದಿ ವಿದ್ಯಾರ್ಥಿಗಳಿಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕಿ ವಿದ್ಯಾಲತಾ ಅವರಿಗೆ ಶುಭ ಹಾರೈಸಲಾಯಿತು.

## ಚಿತ್ರಕಲಾ ಗ್ರೇಡ್ ಪರೀಕ್ಷೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ:




**2023-24ನೇ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು ಇವರು ನಡೆಸಿದ ಚಿತ್ರಕಲಾ ಗ್ರೇಡ್ ಹೈಯರ್ ಪರೀಕ್ಷೆಗೆ** 11ವಿದ್ಯಾರ್ಥಿನಿಯರು ಹಾಜರಾಗಿದ್ದರು. ಅವರಲ್ಲಿ 7 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, 4 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಈ ವಿದ್ಯಾರ್ಥಿನಿಯರಿಗೆ ನಮ್ಮ ಶಾಲೆಯ ಚಿತ್ರಕಲಾ ಶಿಕ್ಷಕಿ ಜಯಂತಿ ಎಂ. ಇವರು ಸೂಕ್ತ ಮಾರ್ಗದರ್ಶನ ಮಾಡಿರುತ್ತಾರೆ.



**ವಿಜಯ ಕರ್ನಾಟಕ ಪತ್ರಿಕೆಯ ವತಿಯಿಂದ ಪರಿಸರ ದಿನಾಚರಣೆಯಂದು ನಡೆದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ನಮ್ಮ ವಿದ್ಯಾರ್ಥಿಗಳು:**

**ಆಶ್ರಿತಾ ರೈ, ಛಾಯಾಶ್ರೀ , ತುಷಾರ್ ಹಾಗೂ ಸಾಗರ್**



**ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಹಂತದಲ್ಲಿ ನಡೆದ ಸ್ಪರ್ಧೆ**



4.

ಮಕ್ಕಳ ದಾಖಲಾತಿ ಅಭಿವೃದ್ಧಿಪಡಿಸುವಲ್ಲಿ ಸಮುದಾಯದ ಪಾತ್ರ:

ತಮ್ಮ ಗ್ರಾಮದ ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದೆಂಬ ತಿಳುವಳಿಕೆ ಹೊಂದಿರುವ ಗ್ರಾಮಸ್ಥರು ಶಾಲೆಯಿಂದ ಹೊರಗುಳಿಯಲು ಪ್ರಯತಿಸುವ ವಿದ್ಯಾರ್ಥಿಗಳನ್ನು ತಾವೇ ತಂದು ಶಾಲೆಗೆ ತಲುಪಿಸಿ ಹೋಗುವ ಕಾರಣ ಶಾಲೆಯಿಂದ ಹೊರಗುಳಿಯುವ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಿದೆ.



ಶಾಲಾ ವಾರ್ಷಿಕೋತ್ಸವ ಹಾಗೂ ಇನ್ನಿತರ ಸಮಾರಂಭಗಳಲ್ಲಿ ಪೋಷಕರು ಹಾಗೂ ಗ್ರಾಮಸ್ಥರು ಹೃತ್ಪೂರ್ವಕ ಸಹಕಾರ ನೀಡುತ್ತಲಿರುವುದರಿಂದ ಶಾಲೆಯು ಅಭಿವೃದ್ಧಿ ಪಥದಲ್ಲಿ ಮುಂದಡಿ ಇಡುವುದು ಸುಲಭವೆನಿಸಿದೆ.









ಸಂಭ್ರಮದ ಶಾಲಾ ಪ್ರಾರಂಭೋತ್ಸವ **2024-25**

ಕ್ಲಸ್ಟರ್ ನಲ್ಲಿರುವ ಏಳು ಶಾಲೆ ಪ್ರಾಥಮಿಕ ಶಾಲೆಗಳಿಗೆ ಭೇಟಿ ಶಾಲೆಯಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ತಿಳಿಸಿ ಶಾಲೆಗೆ ದಾಖಲಾಗುವಂತೆ  ವಿದ್ಯಾರ್ಥಿಗಳ ಮನವೊಲಿಕೆ



ದಾಖಲಾತಿ ಹೆಚ್ಚಿಸುವ ಸಲುವಾಗಿ ಎಸ್ ಡಿ ಎಂ ಸಿ ಮಾರ್ಗದರ್ಶನದಲ್ಲಿ ಶಾಲಾ ಸೌಲಭ್ಯವನ್ನು ತಿಳಿಸುವ ಕರಪತ್ರವನ್ನು ಪ್ರತಿ ಶಾಲೆಗಳಿಗೆ ವಿತರಿಸಲಾಯಿತು







ಶಾಲಾ ದಾಖಲಾತಿ ಹೆಚ್ಚಿಸುವಂತೆ **Youtube** ನಲ್ಲಿ ಶಾಲಾ ಸೌಲಭ್ಯಗಳ ಬಗ್ಗೆ ವಿಡಿಯೋವನ್ನು ತಯಾರಿಸಿ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಯಿತು. ಲಿಂಕ್ ಈ ಕೆಳಗಿನಂತಿದೆ

https://youtu.be/4-vrW-7HpnQ?si=7mG8psgUBjGpuici

ದಾಖಲಾತಿಗೆ ನೆರವಾಗುವಂತೆ ಗೂಗಲ್ **Google Form** ತಯಾರಿಸಿ ಜಾಲತಾಣಗಳಲ್ಲಿ ಹಾಗೂ ವಾಟ್ಸಪ್ ಗ್ರೂಪ್ ಗಳಲ್ಲಿ ಹಂಚಲಾಯಿತು ಅದರ ಲಿಂಕ್ ಈ ಕೆಳಗಿನಂತಿದೆ

https://docs.google.com/forms/d/e/1FAIpQLScPTVfG5RYZc7NX0Wr1VI_-w1THJVAiviV3XK2kJ1njkrKbzg/viewform

## 2023-24 ನೇ ಸಾಲಿನ SSLC ಪರೀಕ್ಷಾ ಫಲಿತಾಂಶ :



## ಭಾಗ II. 3.3 ಶಾಲೆಗೆ ಅಧಿಕಾರಿಗಳ ಭೇಟಿ












## V. ಆವಿಷ್ಕೃತ ಚಟುವಟಿಕೆಗಳು


1. **School Blog**




2. **School News Channel**




http://ghsbadagayekkar.blogspot.com/2024/06/sslc-result-2.html



ಉದಯವಾಣಿ



# ಸತತ ಯೋಗಾಭ್ಯಾಸದಿಂದ ಆರೋಗ್ಯವಂತರಾಗಿ: ಆನಂದ



**ಬಜಪೆ, ಜೂ. 19:** ಬಡಗ ಎಕ್ಕಾರಿನ ಸರಕಾರಿ ಪ್ರೌಢಶಾಲೆಯಲ್ಲಿ ಜೂ.21 ರಂದು ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಹತ್ತನೇ ವರ್ಷದ ಸಂಭ್ರಮಾಚರಣೆಯ ಪೂರ್ವಭಾವಿ ತಯಾರಿಯಾಗಿ ಶ್ರೀ ಪತಂಜಲಿ ಯೋಗ ಶಿಕ್ಷಣ ಕೇಂದ್ರ ಸಮಿತಿ ತುಮಕೂರು, ಬಜಪೆ ಶಾಖೆ ವತಿಯಿಂದ ಯೋಗ ತರಬೇತಿಯನ್ನು ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ನಡೆಸಲಾಯಿತು.

ಈ ಸಂದರ್ಭ ಹತ್ತನೇ ವರ್ಷದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಎಲ್ಲರೂ ಪಾಲ್ಗೊಂಡು ಯೋಗಾಭ್ಯಾಸ ನಡೆಸಿ ಆರೋಗ್ಯವಂತರಾಗಿ. ಸಂಸ್ಕಾರ, ಸಂಘಟನೆ, ಸೇವೆ, ಸದೃಢತೆ ಹೆಚ್ಚಾಗಬೇಕೆಂಬ ಸದುದ್ದೇಶದಿಂದ ಹಮ್ಮಿಕೊಂಡಂತಹ ಕಾರ್ಯಕ್ರಮ ಇದಾಗಿದೆ ಎಂದು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಬಜಪೆ ಇಲ್ಲಿನ ಯೋಗ ತರಬೇತುದಾರ ಆನಂದ ತಿಳಿಸಿದರು.

ಯೋಗ ಪ್ರಾತ್ಯಕ್ಷಿಕೆಯನ್ನು ಕೇಶವ ಅವರು ನಡೆಸಿಕೊಟ್ಟರು. ಪ್ರೌಢಶಾಲೆಯ 125 ವಿದ್ಯಾರ್ಥಿಗಳಿಗೆ ಧ್ಯಾನ, ಉಸಿರಾಟ, ಕ್ರಿಯೆ ನಿಂತಲ್ಲೇ ಓಟ, ಮೆದುಳಿಗೆ ಅಭ್ಯಾಸ ಹಾಗೆ ದೇಹದ ವಿವಿಧ ಅಂಗಗಳಿಗೆ ಚಾಲನೆ ಕೊಡುವ ಅಭ್ಯಾಸ, ವೃಕ್ಷಾಸನ, ತಾಡಾಸನ , ಪರ್ವತಾಸನ ಮೊದಲಾದ ಆಸನಗಳ ಪರಿಚಯವನ್ನು ಮಾಡಿಸುವುದರ ಜತೆಗೆ ಯೋಗದ ಮಹತ್ವದ ಬಗ್ಗೆ ಪ್ರಾತ್ಯಕ್ಷಿಕೆ ನೀಡಿ ಅಭ್ಯಾಸವನ್ನು ಮಾಡಿಸುವುದರ ಮೂಲಕ ಮಾಹಿತಿಯನ್ನು ನೀಡಿದರು.

ಉದಯವಾಣಿ



# ಬಡಗಎಕ್ಕಾರು ಶಾಲೆ: ವಿದ್ಯುತ್ ಸುರಕ್ಷತಾ ಸಪ್ತಾಹ



**ಬಜಪೆ, ಜೂ. 29:** ಸರಕಾರಿ ಪ್ರೌಢಶಾಲೆ ಬಡಗ ಎಕ್ಕಾರಿನಲ್ಲಿ ಇಂಧನ ಇಲಾಖೆಯ ವತಿಯಿಂದ ರಾಷ್ಟ್ರೀಯ ವಿದ್ಯುತ್ ಸಪ್ತಾಹ -2024ರ ಅಂಗವಾಗಿ ವಿದ್ಯುತ್ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಅಪಾರ ಮುಖ್ಯ ವಿದ್ಯುತ್ ಪರಿವೀಕ್ಷಕರು ಮಂಗಳೂರು ಕಚೇರಿ ಅಧಿಕಾರಿಗಳು ಹಾಗೂ ಸಿಬಂದಿಗಳ ವತಿಯಿಂದ ನಡೆಯಿತು.

ವಿದ್ಯುತ್ ಪರಿವೀಕ್ಷಣಾಲಯದ ಸಹಾಯಕ ವಿದ್ಯುತ್ ಪರಿವೀಕ್ಷಕ ವಿರೂಪಣ್ಣ ಕುಂಬಾರ ಅವರು ಪ್ರಾಸ್ತಾವಿಕ ಮಾತನಾಡಿ, ವಿದ್ಯುತ್ ಅಪಘಾತಗಳಿಂದ ಪ್ರತಿವರ್ಷ ಸಂಭವಿಸುವ ಹಾನಿಗಳು ಹಾಗೂ ಸುರಕ್ಷತಾ ಸಪ್ತಾಹದ ಆಚರಣೆಯ ಅಗತ್ಯತೆ ತಿಳಿಸಿದರು.

ವಿದ್ಯುತ್ ಪರಿವೀಕ್ಷಕ ಮನೋಜ್ ಎಂ. ಅವರು ವಿದ್ಯುತ್ ಉಪಕರಣಗಳ ಸರಿಯಾದ ಬಳಕೆ, ವಿದ್ಯುತ್ ಬಳಕೆಯಲ್ಲಿ ಅನುಸರಿಸಬೇಕಾದ ವಿವಿಧ ಸುರಕ್ಷತಾ ಕ್ರಮಗಳು, ವಿದ್ಯುತ್ ವಾಹಕಗಳು ಹಾಗೂ ಅವಾಹಕಗಳನ್ನು ವಿದ್ಯುತ್ ಅಪಘಾತಗಳಲ್ಲಿ ಬಳಸುವ ಕುರಿತು ಸೂಕ್ತ ವಿವರಣೆ ಹಾಗೂ ಮಾಹಿತಿ ನೀಡಿದರು.

**ಪ್ರಾತ್ಯಕ್ಷಿಕೆ**

ವಿದ್ಯುತ್ ಅಪಘಾತಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಗೆ ಒಣಗಿದ ಮರದ ಹಲಗೆ ಬಳಸುವ ಬಗ್ಗೆ, ಕೃತಕ ಉಸಿರಾಟದ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಮಾಹಿತಿ ನೀಡಲಾಯಿತು. ರಸಪ್ರಶ್ನೆ ನಡೆಸಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಯಿತು.

ಬಳಿಕ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ವತಿಯಿಂದ ಸಿಹಿ ತಿಂಡಿ ವಿತರಿಸಲಾಯಿತು. ಉಪ ವಿದ್ಯುತ್ ಪರಿವೀಕ್ಷಕ ಸುರೇಂದ್ರ, ಅಧೀಕ್ಷಕ ಪೃಥ್ವಿರಾಜ್ ಸಿ., ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಪೂರ್ಣಿಮ ಎಚ್. ಎಂ., ಶಿಕ್ಷಕಿಯರಾದ ಜ್ಯೋತಿ ಬಿ., ರಾಜಶ್ರೀ, ವಿದ್ಯಾಲತಾ, ವಿನ್ನಿ ನಿರ್ಮಲ ಡಿ'ಸೋಜಾ, ಜಯಂತಿ ಎಂ., ಶಿಕ್ಷಕ ಡಾ। ಅನಿತ್ ಕುಮಾರ್ ಉಪಸ್ಥಿತರಿದ್ದರು.

ಶಿಕ್ಷಕಿ ವಿದ್ಯಾಗೌರಿ ಎಂ.ಕೆ ಸ್ವಾಗತಿಸಿದರು. ಚಿತ್ರಾಶ್ರೀ ಕೆ.ಎಸ್. ವಂದಿಸಿದರು.

**ವಿದ್ಯುತ್ ಸುರಕ್ಷ ಕ್ರಮಗಳು**

ವಿದ್ಯುತ್ ಸುರಕ್ಷತೆಗಾಗಿ ಮೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಬಳಸಲು ತಿಳಿಸಿದರು. ಮನೆಗಳಲ್ಲಿ ಕಡ್ಡಾಯವಾಗಿ 3 ಪಿನ್ ಪ್ಲಗ್ ಮಾತ್ರ ಬಳಸುವುದು, ಮರಗಳು ಹಾಗೂ ವಿದ್ಯುತ್ ಕಂಬಗಳ ಅಡಿಯಲ್ಲಿ ಮಳೆಗಾಲದಲ್ಲಿ ನಿಲ್ಲುವುದು ಅಪಾಯಕಾರಿ. ವಿದ್ಯುತ್ ಕಂಬಗಳಿಗೆ ಸಾಕುಪ್ರಾಣಿಗಳನ್ನು ಕಟ್ಟುವುದು, ತುಂಡಾದ, ಹೊರಕವಚ ಹರಿದ ತಂತಿಗಳನ್ನು ಮುಟ್ಟದೇ ಇರುವ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮಾಹಿತಿ ನೀಡಿದರು. ವಿದ್ಯಾರ್ಥಿಗಳ ಕುತೂಹಲಕರ ಪ್ರಶ್ನೆಗಳಿಗೆ ಆಸಕ್ತಿಕರ ಮತ್ತು ಸಮರ್ಪಕ ಉತ್ತರಗಳನ್ನು ಮನ ಮುಟ್ಟುವಂತೆ ವಿವರಿಸಿದರು. ಪ್ರಮುಖ ವಿದ್ಯುತ್ ಸುರಕ್ಷ ಕ್ರಮಗಳು, ವಿದ್ಯುತ್ ಉಪಕರಣಗಳ ಸ್ವಯಂ ಪರಿಶೀಲನೆಯ ಅಪಾಯಗಳು, ಬಳಸದ ಸಾಕೆಟ್ ಗಳಿಗೆ ಸುರಕ್ಷತಾ ಮುಚ್ಚಳಗಳ ಬಳಕೆ, ತುಂಡಾದ ತಂತಿಗಳು ಹಾಗೂ ಜೋತಾಡುತ್ತಿರುವ ತಂತಿಗಳ ಸಮೀಪ ಹೋಗಬಾರದು, ವಿದ್ಯುತ್ ತಂತಿಗಳ ಸಮೀಪ ಡ್ರೋನ್ ಹಾಗೂ ಗಾಳಿಪಟ ಬಳಕೆ ಮಾಡಬಾರದು ಎಂಬ ಬಗ್ಗೆ ಮನೋಜ್ ಎಂ. ಅವರು ಮಾಹಿತಿ ನೀಡಿದರು.

# ಮುಟ್ಟಿನ ಕಪ್: ವಿದ್ಯಾರ್ಥಿನಿಯರಿಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬಜಪೆ: ಮೈತ್ರಿ ಮುಟ್ಟಿನ ಕಪ್ ಬಗ್ಗೆ ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಮಾಹಿತಿ ಕಾರ್ಯಕ್ರಮ ಬಡಗ ಎಕ್ಕಾರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆಯಿತು.

ಎಕ್ಕಾರಿನ ಸಮುದಾಯ ಆರೋಗ್ಯ ಕೇಂದ್ರದ ಅಧಿಕಾರಿಗಳು ಮಾಹಿತಿ ನೀಡಿದರು. ಶಾಲೆಗೆ ಹೋಗುವ ಹೆಣ್ಣು ಮಕ್ಕಳು, ಕಾಲೇಜಿಗೆ ಹೋಗುವ ಯುವತಿಯರು, ಕೆಲಸ ಮಾಡುವ ಮಹಿಳೆಯರು, ಮಹಿಳಾ ಕ್ರೀಡಾಪಟುಗಳು ಹೀಗೆ ಎಲ್ಲರೂ ಮುಟ್ಟಿನ ಕಪ್ ಬಳಸಬಹುದು. ಮಹಿಳೆಯರಿಗೆ ಕಾಯಿಲೆ ಇದ್ದಲ್ಲಿ ಮುಟ್ಟಿನ ಕಪ್ ಬಳಕೆಯ ಮುಂಚೆ ವೈದ್ಯರಿಂದ ಸೂಕ್ತ ಸಲಹೆ ಪಡೆದುಕೊಳ್ಳುವುದು ಉತ್ತಮ ಎಂದು ಅಧಿಕಾರಿಗಳು ಸಲಹೆ ನೀಡಿದರು. ವಿದ್ಯಾರ್ಥಿನಿಯರಿಗೆ ವೈಯಕ್ತಿಕ ಸ್ವಚ್ಛತೆ ಪಾಲನೆ ಕುರಿತು ಮಾಹಿತಿ ನೀಡಲಾಯಿತು.

ಶಾಲೆಯ ಮುಖ್ಯ ಶಿಕ್ಷಕಿ ಇಂದಿರಾ ಎನ್. ರಾವ್ ಪ್ರಸ್ತಾವಿಕವಾಗಿ ಮಾತನಾಡಿದರು. ಪೂರ್ಣಿಮಾ ಎಚ್. ಎಂ, ರಾಜಶ್ರೀ ಕೆ. ವಿದ್ಯಾಲತಾ, ರಮ್ಯಾ .ಕೆ, ಚಿತ್ರಾಶ್ರೀ ಕೆ.ಎಸ್ ಇದ್ದರು. ವಿದ್ಯಾಗೌರಿ ಸ್ವಾಗತಿಸಿದರು. ವಿನ್ನಿ ನಿರ್ಮಲ ವಂದಿಸಿದರು.



ಮೈತ್ರಿ ಮುಟ್ಟಿನ ಕಪ್ ಬಗ್ಗೆ ವಿದ್ಯಾರ್ಥಿನಿಯರಿಗೆ ಮಾಹಿತಿ ಕಾರ್ಯಕ್ರಮವು ಬಡಗ ಎಕ್ಕಾರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆಯಿತು



ಬಂಟ್ವಾಳದ ವಿದ್ಯಾಗಿರಿ ಎಸ್‌ವಿಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಂಗಳವಾರ ಹದಿಹರೆಯದ ಹೆಣ್ಣುಮಕ್ಕಳ ಸ್ವಚ್ಛತೆ ಮತ್ತು ಆರೋಗ್ಯ ಮಾಹಿತಿ ಕಾರ್ಯಕ್ರಮ ನಡೆಯಿತು

ಉದಯವಾಣಿ

4/4

## ಎಕ್ಕಾರಿನ ಸರಕಾರಿ ಪ್ರೌಢಶಾಲೆಯಲ್ಲಿ ಸ್ವಚ್ಛತ ಪಕ್ವಾಡ ಕಾರ್ಯಕ್ರಮ

# ಮಂಗಳೂರು ನಗರದಲ್ಲಿ ಪ್ರತಿದಿನ 300 ಟನ್ ಕಸ ಉತ್ಪತ್ತಿ



**ಬಜಪೆ, ಜು.4:** ಎಂ.ಆರ್.ಪಿ.ಎಲ್. ಸಂಸ್ಥೆಯ ವತಿಯಿಂದ ಸ್ವಚ್ಛತಾ ಪಕ್ವಾಡ ಕಾರ್ಯಕ್ರಮ- 2024 ಬಡಗ ಎಕ್ಕಾರಿನ ಸರಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ತ್ಯಾಜ್ಯ ನಿರ್ವಹಣೆಯ ಕುರಿತು ಪ್ರಾತ್ಯಕ್ಷಿಕೆ ಮೂಲಕ ಹಸಿ ಕಸದಿಂದ ಉಪಯುಕ್ತ ಗೊಬ್ಬರವನ್ನು ಮನೆಯಲ್ಲಿ ತಯಾರಿಸುವ ವಿಧಾನದ ಬಗ್ಗೆ ಉಪಯುಕ್ತ ಮಾಹಿತಿ ನೀಡಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ರಾಮಕೃಷ್ಣ ಮಿಷನ್ ಸ್ವಚ್ಛತಾ ಅಭಿಯಾನದ ಸಂಯೋಜಕ ರಂಜನ್ ಬೆಳ್ಳರ್ಪಾಡಿ ಅವರು ಮಾಹಿತಿ ನೀಡಿ, ಪ್ರತಿದಿನ ಮಂಗಳೂರು ನಗರದಲ್ಲಿ 300 ಟನ್, ಬೆಂಗಳೂರು ಮಹಾನಗರದಲ್ಲಿ 2,400 ಟನ್, ಇಡೀ ಭಾರತದಲ್ಲಿ 2 ಲಕ್ಷ ಟನ್ ಕಸ ಉತ್ಪತ್ತಿಯಾಗುತ್ತಿದೆ. ಆದರೆ ಇದರಲ್ಲಿ ಕೇವಲ ಶೇ.40 ಮಾತ್ರ ನಿರ್ವಹಣೆಯಾಗುತ್ತಿದೆ. ಉಳಿದ ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳು ವಿವಿಧ ನೀರಿನ ಮೂಲಗಳಿಗೆ ಸೇರಿ ಸಮುದ್ರ ಸೇರುತ್ತದೆ. ಅಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳು ಅತಿಸೂಕ್ಷ್ಮ ಕಣಗಳಾಗಿ ವಿಭಜನೆ ಹೊಂದಿ ಮೈಕ್ರೋ ಪ್ಲಾಸ್ಟಿಕ್ ರೂಪದಲ್ಲಿ ಉಪ್ಪು ಹಾಗೂ ಮೀನುಗಳ ರೂಪದಲ್ಲಿ ನಮ್ಮ ತಟ್ಟೆಗೆ ಹಿಂದಿರುಗಿ ಬರುತ್ತದೆ ಎಂದು ಹೇಳಿದರು.

ಶಾಲೆಯ 50 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ್ದಕ್ಕಾಗಿ ಎಂಆರ್‌ಪಿಎಲ್ ಸಂಸ್ಥೆಯನ್ನು ಅಭಿನಂದಿಸಲಾಯಿತು. ನಾಡಪ್ರಭು ಕೆಂಪೇಗೌಡರ ಜನ್ಮದಿನೋತ್ಸವ ಆಚರಣೆ ಪ್ರಯುಕ್ತ ಮಂಗಳೂರು ತಾಲೂಕು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ 8ನೇ ತರಗತಿಯ ಅಫ್ನಾನಾ ಬಾನು ಅವರನ್ನು ಸಮ್ಮಾನಿಸಲಾಯಿತು.

ಎಂ.ಆರ್.ಪಿ.ಎಲ್. ಸಂಸ್ಥೆಯ ಮಾನವ ಸಂಪನ್ಮೂಲ ಅಧಿಕಾರಿ ಸ್ಟೀವನ್ ಪಿಂಟೋ ಸ್ವಚ್ಛತಾ ಸಂಕಲ್ಪವನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು. ಎಂ.ಆರ್.ಪಿ.ಎಲ್. ಸಂಸ್ಥೆಯ ಹಿರಿಯ ಅಧಿಕಾರಿ ನಾಗರಾಜ ರಾವ್ ಸಂಸ್ಥೆಯ ಪ್ರತಿನಿಧಿಯಾಗಿ ಉಪಸ್ಥಿತರಿದ್ದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸುದೀಪ್ ಅಮೀನ್ ಅಧ್ಯಕ್ಷತೆ ವಹಿಸಿದ್ದರು. ಎಕ್ಕಾರು ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಪದ್ಮಾಕ್ಷಿ, ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಸುರೇಶ್ ಕೆ., ಮೆಲ್ವಿನ್, ಬಬಿತಾ, ವಿನೋದಾ ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿಗಳು, ಹೆತ್ತವರು, ಮುಖ್ಯ ಶಿಕ್ಷಕಿ ಇಂದಿರಾ ಎನ್.ರಾವ್, ಶಿಕ್ಷಕಿಯರಾದ ಪೂರ್ಣಿಮಾ ಎಚ್. ಎಂ., ಜ್ಯೋತಿ ಬಿ., ರಾಜಶ್ರೀ ಕೆ., ರಮ್ಯಾ ಕೆ., ವಿದ್ಯಾಲತಾ, ವಿನ್ನಿ ನಿಮ್ಮಿಲಾ ಡಿ'ಸೋಜಾ, ಜಯಂತಿ ಎಂ. ಹಾಗೂ ಶಿಕ್ಷಕ ಡಾ| ಅನಿತ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕಿ ವಿದ್ಯಾಗೌರಿ ಎಂ.ಕೆ ಸ್ವಾಗತಿಸಿದರು. ಚಿತ್ರಾಶ್ರೀ ಕೆ.ಎಸ್.ವಂದಿಸಿದರು.

### ಗೊಬ್ಬರ ತಯಾರಿ

ಪ್ಲಾಸ್ಟಿಕ್ ಲೋಟ, ತಟ್ಟೆ ಬಳಸುವುದನ್ನು ನಿಲ್ಲಿಸುವ ಅಗತ್ಯತೆ, ಪೇಪರ್ ಲೋಟದಲ್ಲಿರುವ ಪ್ಲಾಸ್ಟಿಕ್ ಪೊರೆಯಿಂದ ದೇಹಕ್ಕಾಗುವ ಹಾನಿಗಳನ್ನು ಮನದಟ್ಟು ಮಾಡಿಕೊಡಲಾಯಿತು. ನಗರ ಪ್ರದೇಶದಲ್ಲಿ ಇರುವವರು ಹಸಿ ಕಸವನ್ನು ನಿರ್ವಹಣೆ ಮಾಡಲು ಪ್ಯಾಟ್ ಕಂಪೋಸ್ಟ್ ವಿಧಾನವನ್ನು ಅನುಸರಿಸಬಹುದು. ಹಳ್ಳಿ ಪ್ರದೇಶಗಳಲ್ಲೂ ದೊಡ್ಡ ಬ್ಯಾರೆಲ್‌ನ್ನು ಉಪಯೋಗಿಸುವ ಮೂಲಕ ದೊಡ್ಡ ಪ್ರಮಾಣದಲ್ಲಿ ಗೊಬ್ಬರವನ್ನು ತಯಾರಿಸಲು ಬಳಸಬಹುದು ಎಂದು ರಂಜನ್ ಬೆಳ್ಳರ್ಪಾಡಿ ತಿಳಿಸಿದರು. ಕಸವೆನಿಸುವ ವಸ್ತುಗಳನ್ನು ಕಂಡಲ್ಲಿ ಬಿಸಾಡದೇ ತಮ್ಮೊಂದಿಗೆ ತೆಗೆದುಕೊಂಡು ಬರಲು ಸಣ್ಣದೊಂದು ಚೀಲವನ್ನು ಜತೆಗಿಟ್ಟುಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಲು ತಿಳಿಸಲಾಯಿತು. ಜೀವಿಗಳ ಅಳಿವು-ಉಳಿವು ನಮ್ಮ ಕೈಯಲ್ಲಿದೆ ಎಂಬ ತಿಳುವಳಿಕೆ ಈ ಕಾರ್ಯಕ್ರಮ ದಲ್ಲಿ ಮೂಡಿಸಲಾಯಿತು.

---

ವಿಜಯ ಕರ್ನಾಟಕ ಸೋಮವಾರ, 17 ಜೂನ್ 2024

## ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ಯಕ್ಷ ಶಿಕ್ಷಣ ತರಗತಿ ಉದ್ಘಾಟನೆ

# ಜೀವನ ಮೌಲ್ಯ ಬೆಳೆಸುವ ಕಲೆ ಯಕ್ಷಗಾನ

**ವಿಕ ಸುದ್ದಿಲೋಕ** ಬಜಪೆ



ಯಕ್ಷ ಶಿಕ್ಷಣದ 2ನೇ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಗಿರೀಶ್ ಎಂ.ಶೆಟ್ಟಿ ಮಾತನಾಡಿದರು.

''ಬದುಕಿನಲ್ಲಿ ಶಿಸ್ತು ಮತ್ತು ಮೌಲ್ಯಗಳನ್ನು ಬೆಳೆಸುವುದರ ಜತೆಗೆ ಜ್ಞಾನ ವೃದ್ಧಿಸುವ ಅದ್ಭುತ ಕಲೆ ಯಕ್ಷಗಾನ.' ಎಂದು ಯಕ್ಷ ಧ್ರುವ ಪಟ್ಲ ಫೌಂಡೇಶನ್ ಕಟೀಲು - ಎಕ್ಕಾರು ಘಟಕದ ಅಧ್ಯಕ್ಷ ಗಿರೀಶ್ ಎಂ. ಶೆಟ್ಟಿ ಹೇಳಿದರು.

ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್ ವತಿಯಿಂದ ನಡೆಯುವ ಯಕ್ಷ ಶಿಕ್ಷಣದ 2ನೇ ವರ್ಷದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದರು.

ಎಕ್ಕಾರು ಬಂಟರ ಸಂಘದ ಅಧ್ಯಕ್ಷ ರತ್ನಾಕರ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಯಕ್ಷ ಶಿಕ್ಷಣ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು. 60 ವಿದ್ಯಾರ್ಥಿಗಳು ಯಕ್ಷ ಶಿಕ್ಷಣ ತರಬೇತಿಗೆ ನೋಂದಾಯಿಸಿದ್ದು ವಾರದಲ್ಲಿ ಎರಡು ತರಗತಿಗಳನ್ನು ನೀಡಿ ಅಭ್ಯಾಸ ಮಾಡಿಸಲಾಗುವುದು. ಮಕ್ಕಳಲ್ಲಿ ಸಂಸ್ಕಾರ ಮೌಲ್ಯಗಳ ವೃದ್ಧಿಯಾಗಿದ್ದಲ್ಲದೆ ಶಾಲಾ ದಾಖಲಾತಿಯ ವೃದ್ಧಿಗೂ ಯಕ್ಷ ಶಿಕ್ಷಣ ವ್ಯವಸ್ಥೆ ಸಹಕಾರಿಯಾಗಿದೆ ಎಂದು ಶಿಕ್ಷಕ ಸಂಚಾಲಕ ಡಾ. ಅನಿತ್ ಕುಮಾರ್ ಹೇಳಿದರು.

ಯಕ್ಷ ಶಿಕ್ಷಣ ಗುರುಗಳಾದ ರಾಮ್ ಪ್ರಕಾಶ್ ಕಲ್ಲೂರಾಯ ಆರಂಭಿಕ ನಾಟ್ಯ ಹೆಜ್ಜೆ ಕಲಿಸುವುದರೊಂದಿಗೆ ಎರಡನೇ ವರ್ಷದ ತರಗತಿಗೆ ಚಾಲನೆ ನೀಡಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಸುದೀಪ್ ಅಮೀನ್, ಗ್ರಾಪಂ ಸದಸ್ಯ ವಿಕ್ರಮ್ ಮಾಡ, ಶಾಲಾ ಮುಖ್ಯ ಶಿಕ್ಷಕಿ ಇಂದಿರಾ ಎನ್.ರಾವ್, ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಪದಾಧಿಕಾರಿಗಳಾದ ಸತೀಶ್ ಶೆಟ್ಟಿ, ನಿತೇಶ್ ಶೆಟ್ಟಿ, ಭರತೇಶ್ ಶೆಟ್ಟಿ ವೇದಿಕೆಯಲ್ಲಿದ್ದರು.

ರಾಜೇಂದ್ರ ಪ್ರಸಾದ್ ಸ್ವಾಗತಿಸಿದರು. ಶಿಕ್ಷಕಿ ಚಿತ್ರಾಶ್ರೀ ನಿರೂಪಿಸಿದರು. ಶಿಕ್ಷಕರು, ವಿದ್ಯಾರ್ಥಿಗಳು ಆರಂಭ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.

---

ಕನ್ನಡ ವಾರಪತ್ರಿಕೆ

ತುಳುನಾಡು ವಾರ್ತೆ

KANNADA WEEKLY NEWS PAPER ತುಳುನಾಡ ಸಂಸ್ಕೃತಿಯ ದೀವಟಿಗೆ

ಸಂಪಾದಕರು : ಪುನೀತ್ MOB: +91 9900888800 TULUNADU VARTHE Tulunaduvarthe@gmail.com

30 ಕ್ಕೂ ಹೆಚ್ಚು ತುಳುನಾಡಿನ ಆಚಾರ ವಿಚಾರಗಳ ಕುರಿತ ಅಂಕಣಗಳನ್ನು ಹೊಂದಿರುವ ಏಕೈಕ ವಾರ ಪತ್ರಿಕೆ. ನಮ್ಮ ಪತ್ರಿಕೆಯು ನಿಮ್ಮ ಮನೆ ಬಾಗಿಲಿಗೆ ತಲುಪಲು ಸಂಪರ್ಕಿಸಿ ಮೊ.98458 58594 98456 65644

# ವಿದ್ಯಾರ್ಥಿಗಳು ದುಶ್ಚಟ ಮುಕ್ತ ಸ್ವಾಸ್ಥ್ಯ ಸಮಾಜದ ನಿರ್ಮಾಣದಲ್ಲಿ ತಮ್ಮನ್ನ ತೊಡಗಿಸಿಕೊಳ್ಳಬೇಕು- ದಯಾನಂದ ಜಿ.ಕತ್ತಲ್ ಸಾರ್



ಬಜಪೆ:ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಿನ್ನಿಗೋಳಿ ವಲಯದ ವತಿಯಿಂದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವು ಬಡಗ ಎಕ್ಕಾರಿನ ಸರಕಾರಿ ಪ್ರೌಢಶಾಲೆಯಲ್ಲಿ ಇಂದು ನಡೆಯಿತು. ಕಾರ್ಯಕ್ರಮವನ್ನು ಜಿಲ್ಲಾ ಜನ ಜಾಗೃತಿ ವೇದಿಕೆಯ ಮಾಜಿ ಅಧ್ಯಕ್ಷ ಹಾಗೂ ಯುಗಪುರುಷ ಕಿನ್ನಿಗೋಳಿಯ ಪ್ರಧಾನ ಸಂಪಾದಕ ಭುವನಾಭಿರಾಮ ಉಡುಪ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.ಬಳಿಕ ಮಾತನಾಡಿದ ಅವರು ದುಶ್ಚಟಗಳಿಂದ ನಮ್ಮ ನೆಮ್ಮದಿಯೇ ಹಾಳುಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.ನಾವೆಲ್ಲರೂ ದುಶ್ಚಟಗಳಿಂದ ದೂರ ವಿರಬೇಕು ಎಂದರು. ಕಾರ್ಯಕ್ರಮದಲ್ಲಿ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ದಯಾನಂದ ಜಿ ಕತ್ತಲ್ ಸಾರ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ ತಮ್ಮ ಜೀವನದಲ್ಲಿ ವಿಶಿಷ್ಟ ಸಾಧನೆಯನ್ನು ಮಾಡಬೇಕಾದರೆ ನಮಗೆ ಸ್ವಾಸ್ಥ್ಯ ಶರೀರ ಅಗತ್ಯ ಸ್ವಾಸ್ಥ್ಯ ಶರೀರವನ್ನು ಕಾಪಾಡಲು ದುಶ್ಚಟದಿಂದ ನಾವು ಮುಕ್ತರಾಗಿರಬೇಕು. ವಿದ್ಯಾರ್ಥಿಗಳು ದುಶ್ಚಟ ಮುಕ್ತ ಸ್ವಾಸ್ಥ್ಯ ಸಮಾಜದ ನಿರ್ಮಾಣದಲ್ಲಿ ತಮ್ಮನ್ನ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಎಕ್ಕಾರು ಘಟಕದ ಅಧ್ಯಕ್ಷೆ ಶ್ರೀಮತಿ ವಿಮಲಾ , ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಇಂದಿರಾ ಎನ್ ರಾವ್, ಹಿರಿಯ ಶಿಕ್ಷಕಿ ರಾಜಶ್ರೀ ಕೆ, ಬಡಗ ಎಕ್ಕಾರು ಸೇವಾ ಪ್ರತಿನಿಧಿ ಶ್ರೀಮತಿ ಸಂಗೀತ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಚಾರಕರಾದ ಶ್ರೀಮತಿ ಶಾಂತಿ ಮೇಲ್ ಸ್ವಾಗತಿಸಿದರು. ಶ್ರೀಮತಿ ಚಿತ್ರ ಶ್ರೀ. ಕೆ ವಂದಿಸಿದರು. ತೆಂಕ ಎಕ್ಕಾರು ಸೇವಾ ಪ್ರತಿನಿಧಿ ದಿವಾಕರ ಕಾರ್ಯಕ್ರಮ ನಿರೂಪಿಸಿದರು.



---

ಉದಯವಾಣಿ

4/4

## ಬಡಗ ಎಕ್ಕಾರಿನ ಸರಕಾರಿ ಪ್ರೌಢಶಾಲೆ: ವಿದ್ಯಾರ್ಥಿದೀಪ ಕಾರ್ಯಕ್ರಮ

# ಕೋಪ ಕಡಿಮೆ ಮಾಡುವುದರಿಂದ ಏಕಾಗ್ರತೆ ಹೆಚ್ಚಳ



**ಬಜಪೆ, ಜು.18:** ವಿವೇಕ ಜಾಗೃತಿ ಬಳಗ ಮೂಲ್ಕಿ ವತಿ ಯಿಂದ ವಿದ್ಯಾರ್ಥಿದೀಪ ಕಾರ್ಯಕ್ರಮ ದಡಿಯಲ್ಲಿ ಮಕ್ಕಳಲ್ಲಿ ಏಕಾಗ್ರತೆ ಸ್ಥಾಯಿಯಾಗುವ ಬಗ್ಗೆ ಹೇಗೆ ಎನ್ನುವ ವಿಷಯದ ಬಗ್ಗೆ ಕಾರ್ಯಕ್ರಮವು ಬಡಗ ಎಕ್ಕಾರಿನ ಸರಕಾರಿ ಪ್ರೌಢಶಾಲೆಯಲ್ಲಿ ನಡೆಯಿತು.

ಡಿವೈನ್ ಪಾರ್ಕ್ ಸಾಲಿಗ್ರಾಮ ಇಲ್ಲಿಯ ಅಧಿಕಾರಿ ಪ್ರೇಮ ಪ್ರಭಾಕರ್ ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ, ಮನಸ್ಸಿನ ಏಕಾಗ್ರತೆಯ ಬಗ್ಗೆ ಸ್ವಾಮಿ ವಿವೇಕಾನಂದರು ನೀಡಿರುವ ವಿಚಾರಧಾರೆಗಳನ್ನು ವಿದ್ಯಾರ್ಥಿಗಳಿಗೆ ವಿವರವಾಗಿ ಹೇಳಿದರು. ಪಂಚೇಂದ್ರಿಯಗಳಿಂದ ಸಂಗ್ರಹಿಸಿದ ವಿಷಯಗಳು ನಮ್ಮ ಮನಸ್ಸಿಗೆ ತಲುಪುತ್ತದೆ, ಮನಸ್ಸಿನಿಂದ ಬುದ್ಧಿಗೆ ವಿಷಯಗಳು ತಲುಪುತ್ತದೆ, ಬುದ್ಧಿಯಿಂದ ಚಿತ್ತಕ್ಕೆ ನಮಗೆ ವಿಷಯಗಳು ತಲುಪುತ್ತದೆ ಚಿತ್ರದಲ್ಲಿ ಸಂಗ್ರಹವಾದ ವಿಷಯಗಳು ನಮ್ಮ ನಮ್ಮಲ್ಲಿ ಅಚ್ಚಳಿಯದೆ ಉಳಿಯುತ್ತದೆ. ನಮ್ಮಲ್ಲಿ ಕೋಪದ ಗುಣಗಳನ್ನು ಕಡಿಮೆ ಮಾಡುವುದರಿಂದ ಏಕಾಗ್ರತೆ ಹೆಚ್ಚಿಸುತ್ತದೆ. ಯತ್ ಭಾವಂ ತದ್ಭವತಿ ಎನ್ನುವ ಮಾತಿನಂತೆ ನಮ್ಮ ಯೋಚನೆಗಳು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಹಾಗಾಗಿ ನಾವು ಯಾವಾಗಲೂ ಧನಾತ್ಮಕವಾಗಿ ಯೋಚನೆಗಳನ್ನು ಮಾಡಬೇಕು. ಬೆಳಗ್ಗೆ ಏಳುವಾಗ ಮತ್ತು ರಾತ್ರಿ ಮಲಗುವಾಗ ನಾನು ಪ್ರತಿದಿನ ಎಲ್ಲ ವಿಚಾರಗಳಲ್ಲೂ ಉತ್ತಮಗೊಳ್ಳುತ್ತಿದ್ದೇನೆ ಎನ್ನುವ ಸೂಚನೆಯನ್ನು ನಾವು ದಿನನಿತ್ಯ ನಮಗೆ ಹೇಳಿಕೊಳ್ಳುವುದು, ನಾವು ಕಲಿಯುವ ವಿಷಯವನ್ನು ಪ್ರೀತಿಸುವುದು ಮತ್ತು ಗುರುಗಳನ್ನು ಗೌರವಿಸುವುದು, ನಾನು ದಡ್ಡ ಅಲ್ಲ ನಾನು ಉತ್ತಮ ಅನ್ನುವಂತದ್ದನ್ನು ನಮಗೆ ನಾವೇ ಹೇಳಿಕೊಳ್ಳುವುದು. ಪ್ರಪಂಚದಲ್ಲಿ ನಮ್ಮನ್ನು ಅತ್ಯಂತ ಹೆಚ್ಚಾಗಿ ಪ್ರೀತಿಸುವ ವ್ಯಕ್ತಿಗಳು ನಮ್ಮ ತಂದೆ ತಾಯಿಗಳು ಅವರನ್ನು ನಾವು ಗೌರವಿಸಬೇಕೆಂದು ಪ್ರೇಮ ಪ್ರಭಾಕರ್ ಹೇಳಿದರು.

ಪ್ರಸ್ತುತ ವರ್ಷ ಎಸೆಸೆಲ್ಸಿ ಪರೀಕ್ಷೆ ಬರೆಯುವಂತಹ ವಿದ್ಯಾರ್ಥಿಗಳಿಗೆ ಮನಸ್ಸಿನಲ್ಲಿರುವ ಸುಪ್ತ ಭೀತಿಯು ನಮ್ಮ ಮರೆವಿಗೆ ಕಾರಣವಾಗುತ್ತದೆ. ಸುಪ್ತ ಭೀತಿಯನ್ನು ಹೋಗಲಾಡಿಸಲು ಸರಿಯಾದ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರ ಆಧಾರದಲ್ಲಿ ನಮ್ಮ ದಿನನಿತ್ಯದ ಅಭ್ಯಾಸವನ್ನು ನಡೆಸಬೇಕು ಎಂದು ಮಾಹಿತಿ ನೀಡಿದರು.

ಲಯನ್ಸ್ ಕ್ಲಬ್ ನೀರುಡೆ ಕಟೀಲು ಘಟಕ ಅಧ್ಯಕ್ಷ ಸ್ವಾನಿ ಮಿರಾಂದ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿವೇಕ ಜಾಗೃತಿ ಬಳಗ ಮೂಲ್ಕಿ ಅಧ್ಯಕ್ಷ ಶ್ರೀನಿವಾಸ್ ಶ್ರೀಯಾನ್, ವಿವೇಕ ಜಾಗೃತ ಬಳಗದ ಪದಾಧಿಕಾರಿಗಳಾದ ಸುಧಾ ಶ್ರೀಯಾನ್, ಲಲಿತಾ ಭಾಸ್ಕರ್, ಚಂದ್ರಶೇಖರ್ ಪೋಷಕ ಪ್ರತಿನಿಧಿಗಳಾದ ನಾಗೇಶ್ ಅಮೀನ್, ಶಾಲಾ ಮುಖ್ಯೋಪಾಧ್ಯಾಯಿನಿ ಇಂದಿರಾ ಎನ್. ರಾವ್ ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕಿ ವಿದ್ಯಾ ಗೌರಿ ಕಾರ್ಯಕ್ರಮ ನಿರೂಪಿಸಿದರು. ರಾಜಶ್ರೀ ವಂದಿಸಿದರು.



## ಗ್ರಾಮೀಣ ಮಕ್ಕಳಿಗೂ ಆಧುನಿಕ ತಂತ್ರಜ್ಞಾನದ ಅರಿವು

# ಸರ್ಕಾರಿ ಶಾಲೆಯಲ್ಲಿ ವಾರ್ತಾ ವಾಚನ

■ ನಿಶಾಂತ್ ಕಿಲೆಂಜೂರು, ಕಟೀಲು

ಕಟೀಲು ಸಮೀಪದ ಎಕ್ಕಾರು ಎಂಬ ಗ್ರಾಮೀಣ ಭಾಗದ ಸರ್ಕಾರಿ ಪ್ರೌಢ ಶಾಲೆ ಸದಾ ಒಂದಲ್ಲ ಒಂದು ಸುದ್ದಿಯಲ್ಲಿದೆ. ಕಳೆದ ವಾರ ಇಲ್ಲಿನ ವಿದ್ಯಾರ್ಥಿನಿಯರು ಖೋ ಖೋನಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚಿ ಪ್ರಸಿದ್ಧಿ ಪಡೆದರೆ, ಇದೀಗ ಶಾಲೆಯ ಕಾರ್ಯಕ್ರಮಗಳ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಿ ಜನಮೆಚ್ಚುಗೆ ಪಡೆದಿದ್ದಾರೆ.

**» ಎಕ್ಕೂರು ವಿದ್ಯಾಲಯದ ಶಿಕ್ಷಕರ ಶ್ರಮಕ್ಕೆ ಮೆಚ್ಚುಗೆ**

ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ, ಉಚ್ಚಾರಗಳು ಸ್ಪಷ್ಟತೆ, ತಾಂತ್ರಿಕತೆ ಜ್ಞಾನ ಬೆಳೆಸುವ ನಿಟ್ಟಿನಲ್ಲಿಯೂ ಎಕ್ಕಾರು ಸರ್ಕಾರಿ ಪ್ರೌಢಶಾಲೆ ಮುಂದಡಿ ಇರಿಸಿದೆ.

ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳನ್ನು ವಿಡಿಯೋ ಮಾಡಿ, ಸುದ್ದಿಗಳನ್ನು ಮಕ್ಕಳೇ ತಯಾರಿಸಿ ನಂತರ ಅದನ್ನು ವಾಚಿಸಿ ಎಡಿಟ್ ಮಾಡಲಾಗುತ್ತದೆ. ಶಿಕ್ಷಕರು ರೆಕಾರ್ಡ್ ಮಾಡಿದರೆ ಮಕ್ಕಳು ಇದಕ್ಕೆ ಸಂಬಂಧಿಸಿದ ವರದಿಯನ್ನು ತಯಾರಿಸುತ್ತಾರೆ. ನಂತರ ಅದನ್ನು ಶಿಕ್ಷಕರು ಸರಿಪಡಿಸುತ್ತಾರೆ. ಈ ರೀತಿಯಾಗಿ ಇದಕ್ಕೆ ಪೂರಕವಾಗಿ, ಶಿಕ್ಷಕರು ಸಹಕರಿಸುತ್ತಿದ್ದಾರೆ.

ವಿಶ್ವ ಪರಿಸರ ದಿನಾಚರಣೆ

ವಾರ್ತಾ ವಾಚನ ನಿರತ ವಿದ್ಯಾರ್ಥಿನಿ ಮೇಘನಾ(ಚಿತ್ರ 1).

ವಿಡಿಯೋ ರೆಕಾರ್ಡಿಂಗ್ ನಿರತ ಶಿಕ್ಷಕ.

ವಿಡಿಯೋ ಎಡಿಟಿಂಗ್ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿರುವ ಶಿಕ್ಷಕರು.

**ಮಕ್ಕಳಲ್ಲಿ ಸ್ಪಷ್ಟ ಉಚ್ಚಾರ ಮತ್ತು ನಮ್ಮ ಸುತ್ತಮುತ್ತ ನಡೆಯುವ ಸುದ್ದಿಗಳ ಬಗ್ಗೆ ಆಸಕ್ತಿ ಹೊಂದಬೇಕು. ಸರ್ಕಾರಿ ಶಾಲೆ ಖಾಸಗಿ ಶಾಲೆಯಂತೆ ಕಾರ್ಯನಿರ್ವಹಿಸಬೇಕು ಎಂಬ ದೃಷ್ಟಿಯಿಂದ ಈ ವ್ಯವಸ್ಥೆ ಮಾಡಲಾಗಿದೆ. ಶಾಲೆಯಲ್ಲಿ ಬೇರೆ ಬೇರೆ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದರಿಂದ ಶಾಲೆಯನ್ನು ಮಾದರಿಯಾಗಿ ರೂಪಿಸುವುದರ ಜತೆಗೆ ಶಾಲೆಗೆ ಸೇರ್ಪಡೆಯಾಗುವ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಬಹುದು.**

| ಡಾ.ಅನಿತ್ ಕುಮಾರ್ ಎಕ್ಕಾರು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ

**ದೃಶ್ಯ ಮಾಧ್ಯಮದಲ್ಲಿ ಸುದ್ದಿಗಳನ್ನು ವೀಕ್ಷಿಸುತ್ತೇವೆ. ಆದರೆ ಅದರ ಹಿಂದಿನ ಅವಿರತ ಶ್ರಮದ ಅರಿವು ನಮಗಿರಲಿಲ್ಲ. ಈ ವಿಶೇಷ ಕಾರ್ಯಕ್ರಮದಿಂದಾಗಿ ನಮಗೆ ಸ್ಪಷ್ಟವಾಯಿತು. ನಮ್ಮ ಶಾಲೆಯ ಸುದ್ದಿಗಳನ್ನು ಓದುವ ಅವಕಾಶ ನನಗೆ ಲಭಿಸಿರುವುದು ಖುಷಿಕೊಟ್ಟಿದೆ.**

| ಮೇಘನಾ ವಿದ್ಯಾರ್ಥಿನಿ

ನಂತರ ಅದನ್ನು ಸುದ್ದಿ ಮಾಧ್ಯಮದ ರೀತಿಯಲ್ಲಿ ಮಕ್ಕಳ ಪಾಲಕರಿಗೆ ಕಳುಹಿಸಲಾಗುತ್ತದೆ. ಈ ರೀತಿಯಾಗಿ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳನ್ನು ಪಾಲಕರಿಗೆ ತಿಳಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಮುಖ್ಯವಾಗಿ ಮಕ್ಕಳಿಗೆ ಸ್ಪಷ್ಟ ಉಚ್ಚಾರ, ಹಿಂಜರಿಕೆ ಸ್ವಭಾವ ದೂರ ಮಾಡುವ ಪ್ರಯತ್ನ, ನಾಯಕತ್ವ ಗುಣ ಮೈಗೂಡುವ ಸಲುವಾಗಿ ಮಾತ್ರವಲ್ಲದೇ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಯಾವುದೇ ಪಠ್ಯೇತರ ಚಟುವಟಿಕೆಗಳಿಂದ ಕೊರತೆ ಆಗಬಾರದು ಎಂಬ ದೃಷ್ಟಿಯಿಂದ ಈ ರೀತಿಯ ವ್ಯವಸ್ಥೆ ಮಾಡಲಾಗಿದೆ ಎನ್ನುತ್ತಾರೆ ಶಿಕ್ಷಕರು. ಈ ಸುದ್ದಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಶಾಲೆಯ ಯೂಟ್ಯೂಬ್, ಫೇಸ್‌ಬುಕ್ ಖಾತೆಗಳನ್ನು ತೆರೆದು ಅದರಲ್ಲಿ ಅಪ್ ಲೋಡ್ ಮಾಡುವ ಯೋಜನೆಯಲ್ಲಿದ್ದಾರೆ. ಶಾಲೆಯಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸೇರ್ಪಡೆಯ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರಸ್ತುತ ಯೋಗ, ಕರಾಟೆ, ಬೇರೆ ಬೇರೆ ಕ್ರೀಡೆಗಳು ಮತ್ತಿತರ ಚಟುವಟಿಕೆಗಳನ್ನು ಅಳವಡಿಕೊಳ್ಳಲಾಗಿದ್ದು, ಮುಂದಿನ ದಿನದಲ್ಲಿ ಮಾದರಿ ಶಾಲೆಯನ್ನಾಗಿ ರೂಪಿಸುವ ಯೋಜನೆ ಇಲ್ಲಿನ ಶಿಕ್ಷಕರದ್ದು. ಒಟ್ಟಿನಲ್ಲಿ ಖಾಸಗಿ ಶಾಲೆಯ ಪೈಪೋಟಿ ಮಧ್ಯೆ ಸರ್ಕಾರಿ ಶಾಲೆಯೊಂದು ವಿಭಿನ್ನ ರೀತಿಯ ಚಟುವಟಿಕೆಗಳಿಂದ ಗಮನ ಸೆಳೆದು, ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ.



# ಕನ್ನಡಪ್ರಭ

## ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಂದ ಸುದ್ದಿ ವಾಚನ!

### ಮೂಲ್ಕಿ ತಾಲೂಕು ಎಕ್ಕಾರಿನಲ್ಲಿ ಸುದ್ದಿಯಾದ ವಿದ್ಯಾರ್ಥಿಗಳು

• **ಕನ್ನಡಪ್ರಭವಾರ್ತೆ** ಮೂಲ್ಕಿ

ಕಟೀಲು ಸಮೀಪದ ಗ್ರಾಮೀಣ ಪ್ರದೇಶವಾಗಿರುವ ಎಕ್ಕಾರು ಸರ್ಕಾರಿ ಪ್ರೌಢ ಶಾಲೆಯು ಸದಾ ವಿಭಿನ್ನತೆಯನ್ನು ಕಾಪಾಡಿಕೊಂಡು ಬರುತ್ತಿದ್ದು ಕಳೆದ ವಾರ ಇಲ್ಲಿನ ವಿದ್ಯಾರ್ಥಿನಿಯರು ಖೊ ಖೊ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಮಿಂಚಿ ಪ್ರಸಿದ್ಧಿ ಪಡೆದಿದ್ದು ಇದೀಗ ಶಾಲೆಯ ಕಾರ್ಯಕ್ರಮಗಳ ಸುದ್ದಿಗಳನ್ನೇ ಸಾಮಾಜಿಕ ಜಾಲತಾಣಗಳ ಮೂಲಕ ಸುದ್ದಿ ಮಾಡಿ ಸುದ್ದಿಯಾಗುತ್ತಿದ್ದಾರೆ.

ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ, ಉಚ್ಚಾರಗಳು ಸ್ಪಷ್ಟವಾಗಿರಬೇಕು ಮತ್ತು ತಾಂತ್ರಿಕತೆಯ ಬಗ್ಗೆ ಅರಿವಿರಬೇಕು ಎಂಬ ದೃಷ್ಟಿಯಿಂದ, ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳನ್ನು ವಿಡಿಯೋ ರೆಕಾರ್ಡ್ ಮಾಡಿ, ಸುದ್ದಿಗಳನ್ನು ಮಕ್ಕಳೇ ತಯಾರಿಸಿ ನಂತರ ಅದನ್ನು ರೀಡ್ ಮಾಡಿ ಎಡಿಟ್ ಮಾಡಲಾಗುತ್ತದೆ, ಇದಕ್ಕೆ ಪೂರಕವಾಗಿ, ಶಿಕ್ಷಕರು ಸಹಕರಿಸುತ್ತಿದ್ದಾರೆ. ನಂತರ ಅದನ್ನು ಸುದ್ದಿ ಮಾಧ್ಯಮದ ರೀತಿಯಲ್ಲಿ ಮಕ್ಕಳ ಪಾಲಕರಿಗೆ ಕಳುಹಿಸಲಾಗುತ್ತದೆ. ಈ ರೀತಿಯಾಗಿ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳನ್ನು ಪೋಷಕರಿಗೆ ತಿಳಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಒಂದು ಕಡೆ ಸುದ್ದಿ ಓದುವ ವಿದ್ಯಾರ್ಥಿಗಳು, ಮತ್ತೊಂದು ಕಡೆಯಲ್ಲಿ ವಿದ್ಯಾರ್ಥಿಗಳಿಗೆ ವಾಯ್ಸ್ ಕೊಡಲು ಕಲಿಸುತ್ತಿರುವ ಶಿಕ್ಷಕರು, ಇದು ಪತ್ರಿಕೋದ್ಯಮ ಕಾಲೇಜಿನ ವಿದ್ಯಾರ್ಥಿಗಳ ಕಾರ್ಯವಲ್ಲ, ಬದಲಿಗೆ ಎಕ್ಕಾರು ಶಾಲೆ ವಿದ್ಯಾರ್ಥಿಗಳಿಂದ ನಡೆಯುತ್ತಿದೆ.

**ಮಕ್ಕಳಿಗೆ ಸ್ಪಷ್ಟ ಉಚ್ಚಾರ, ಹಿಂಜರಿಕೆ ಸ್ವಭಾವ, ನಾಯಕತ್ವ ಗುಣ ಮೈಗೂಡುವ ಸಲುವಾಗಿ ಮಾತ್ರವಲ್ಲ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಯಾವುದೇ ಪಾಠ್ಯೇತರ ಚಟುವಟಿಕೆಗಳಿಂದ ಕೊರತೆ ಆಗಬಾರದು ಎಂಬ ದೃಷ್ಟಿಯಿಂದ ಈ ರೀತಿಯ ವ್ಯವಸ್ಥೆ ಮಾಡಲಾಗಿದೆ. ಈ ಸುದ್ದಿಗಳನ್ನು ಸಾಮಾಜಿಕ ಜಾಲ ತಾಣದಲ್ಲಿ ಹಂಚಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಶಾಲೆಯ ಯೂಟ್ಯೂಬ್, ಪೇಸ್ ಬುಕ್ ಜಾತೆಗಳನ್ನು ತೆರೆದು ಅದರಲ್ಲಿ ಅಪ್ ಲೋಡ್ ಮಾಡುವ ಯೋಚನೆ ಯೋಜನೆಯಲ್ಲಿದ್ದೇವೆ**

• **ಡಾ. ಅನೀತ್ ಕುಮಾರ್** ಶಿಕ್ಷಕ

MANGALORE Edition Edition
Aug 07, 2024 Page No. 03
Powered by:



## 'ನಮ್ಮ ಶಾಲಾ ವಾರ್ತೆಗಳು': ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಮಕ್ಕಳ ಸಾಧನೆ

▶ ಶಿಕ್ಷಕರ ಮುತುವರ್ಜಿ, ಪ್ರೋತ್ಸಾಹ; ಇದೇ ಮೊದಲ ಬಾರಿಗೆ ಹೈಸ್ಕೂಲ್ ವಿದ್ಯಾರ್ಥಿಗಳಿಂದ ವಾರ್ತೆ ಪ್ರಸಾರ

# ಸರಕಾರಿ ಶಾಲೆ ವಿದ್ಯಾರ್ಥಿಗಳಿಂದ ಸುದ್ದಿ ವಾಹಿನಿ!

**ಬಜಪೆ, ಆ. 4:** ಮುಂದುವರಿದ ಸಮಾಜದಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಅದರಲ್ಲೂ ಸರಕಾರಿ ಶಾಲೆಯ ಮಕ್ಕಳು ನಗರದ ಮಕ್ಕಳಿಗೆ ಸರಿಸಮನಾಗಿ ಬೆಳೆಯಬೇಕು ಎಂಬ ದೂರದೃಷ್ಟಿಯಿಂದ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ 'ನಮ್ಮ ಶಾಲಾ ವಾರ್ತೆಗಳು' ಯೂಟ್ಯೂಬ್ ಸುದ್ದಿ ವಾಹಿನಿಯನ್ನು ಆರಂಭಿಸಲಾಗಿದೆ.

ಪಠ್ಯದ ಜತೆ ಜತೆಯಲ್ಲಿ ಮಕ್ಕಳಲ್ಲಿ ಹಿಂಜರಿಕೆ ದೂರ ಮಾಡುವುದು, ಭಾಷಾ ಶುದ್ಧಿ, ಚಿಂತನಾ ಲಹರಿ, ಸಾಮಾನ್ಯ ಜ್ಞಾನ ವೃದ್ಧಿ ಇತ್ಯಾದಿ ಸಂಕಲ್ಪ ಈ ಸುದ್ದಿ ವಾಹಿನಿ ಆರಂಭದ ಹಿಂದೆ ಇದೆ. ಮುಖ್ಯಶಿಕ್ಷಕಿ ಇಂದಿರಾ ಎನ್. ರಾವ್ ಮತ್ತು ಶಿಕ್ಷಕರು ಮಕ್ಕಳಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಿ ಮುನ್ನಡೆಸುತ್ತಿದ್ದಾರೆ.

**ಚಟುವಟಿಕೆ ಹೀಗಿದೆ...**

ಮೊದಲ ಹಂತದಲ್ಲಿ ತಲಾ 10 ವಿದ್ಯಾರ್ಥಿಗಳ ತಂಡವನ್ನು ರಚಿಸಿ ಶಾಲೆಯಲ್ಲಿ ತಿಂಗಳ ಅವಧಿಯಲ್ಲಿ ಆಯೋಜಿಸಿದ ಪಠ್ಯ ಹಾಗೂ ಪಠ್ಯಪೂರಕ ಚಟುವಟಿಕೆಗಳ ಕಾರ್ಯಕ್ರಮಗಳ ವರದಿಗಳನ್ನು ತಯಾರಿಸುವಂತೆ ಸೂಚಿಸಲಾಗುತ್ತದೆ. ಕನ್ನಡ ಭಾಷಾ ಶಿಕ್ಷಕಿ ವಿದ್ಯಾಗೌರಿ ಮಾರ್ಗದರ್ಶನ ನೀಡುತ್ತಾರೆ.

ವಿದ್ಯಾರ್ಥಿಗಳು ಸಿದ್ಧಪಡಿಸಿದ ವರದಿಗಳನ್ನು ಮರುದಿನ ಮುಖ್ಯಾಂಶರ ಸಂಕ್ಷಿಪ್ತಗೊಳಿಸಿ ವ್ಯಾಕರಣ ಬದ್ಧವಾಗಿ ನೇರ್ಪುಗೊಳಿಸಲಾಗುತ್ತದೆ. ಪರಿಷ್ಕೃತ ವರದಿಯನ್ನು ವಾರ್ತಾ ಪ್ರಸಾರದ ಸಂದರ್ಭ ಹಿನ್ನೆಲೆ ಧ್ವನಿಯಾಗಿ ಹೇಗೆ ಪ್ರಸ್ತುತಪಡಿಸಬೇಕು ಎನ್ನುವುದನ್ನು ಇಬ್ಬರು ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಲಾಗುತ್ತದೆ.

ಶಾಲೆಯ ಕಂಪ್ಯೂಟರ್ ಕೊಠಡಿಯಲ್ಲಿ ಗ್ರೀನ್ ಸ್ಕ್ರೀನ್ ಬಳಸಿ ಶಿಕ್ಷಕರ ಮೊಬೈಲ್‌ನಲ್ಲಿ ವಿದ್ಯಾರ್ಥಿ ಓದುತ್ತಿರುವ ವಾರ್ತೆಯನ್ನು ಮುದ್ರಿಸಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳು ಓದಿದ ವಾರ್ತೆಗಳ ಧ್ವನಿ ಹಾಗೂ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುವ ಕಾರ್ಯಕ್ರಮಗಳ ವೀಡಿಯೋವನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ದೊರೆಯುವ ಏನ್ ಆ್ಯಪ್ ಮೂಲಕ ಸಂಯೋಜಿಸಲಾಗುತ್ತದೆ.

ಸುದ್ದಿಗೆ ಪೂರಕ ಅಡಿಬರಹಗಳನ್ನು ಶಿಕ್ಷಕಿ ರಮ್ಯಾ ಮಾರ್ಗದರ್ಶನದಲ್ಲಿ ತಯಾರಿಸಿ, ವರದಿಗೆ ಅಂತಿಮ ರೂಪ ನೀಡಲಾಗುತ್ತದೆ. ಬಳಿಕ ಡಾ। ಅನಿತ್ ಕುಮಾರ್ ಮಾರ್ಗದರ್ಶನದಲ್ಲಿ ಸಂಕಲನ ಕಾರ್ಯವನ್ನು ಪೂರ್ಣಗೊಳಿಸಿ ಶಾಲೆಯ ಯೂಟ್ಯೂಬ್ ಚಾನೆಲ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ. ಅದರ ಲಿಂಕ್ ಅನ್ನು ಪ್ರತೀ ತರಗತಿಯ ವಿದ್ಯಾರ್ಥಿಗಳ ಹೆತ್ತವರು / ಶಿಕ್ಷಕರು ಇರುವ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹಂಚಲಾಗುತ್ತದೆ.

**ಸಕಾರಾತ್ಮಕ ಚಟುವಟಿಕೆ ತೊಡಗಿ**

ಪ್ರೌಢಾವಸ್ಥೆಯಲ್ಲಿ ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನಕ್ಕೆ ಶೀಘ್ರವಾಗಿ ಹೊಂದಿಕೊಳ್ಳುತ್ತಾರೆ. ▢3

**ತಂತ್ರಜ್ಞಾನ ಸದ್ಬಳಕೆ**

ಗ್ರಾಮೀಣ ವಿದ್ಯಾರ್ಥಿಗಳಾದರೂ ತಂತ್ರಜ್ಞಾನವನ್ನು ಬಳಸಿಕೊಂಡು ನಗರದ ವಿದ್ಯಾರ್ಥಿಗಳಿಗೆ ನಾವೇನೂ ಕಮ್ಮಿಯಿಲ್ಲ ಎಂಬುದನ್ನು ನಮ್ಮ ಶಾಲೆಯ ಮಕ್ಕಳು ತೋರಿಸಿಕೊಟ್ಟಿದ್ದಾರೆ. ಶಾಲೆಯಲ್ಲಿ ನಡೆಯುವ ಪ್ರತೀ ತಿಂಗಳಿನ ಕಾರ್ಯಕ್ರಮಗಳನ್ನು ಚಿತ್ರೀಕರಿಸಿಕೊಂಡು ಟಿವಿ ವಾಹಿನಿಗಳ ಮಾದರಿಯಲ್ಲೇ ವಾರ್ತೆಯ ರೂಪದಲ್ಲಿ 'ನಮ್ಮ ಶಾಲಾ ವಾರ್ತೆಗಳು' ಚಾನೆಲ್ ಮೂಲಕ ಬಿತ್ತರಿಸುತ್ತಿದ್ದಾರೆ.

-ಇಂದಿರಾ ಎನ್. ರಾವ್, ಮುಖ್ಯಶಿಕ್ಷಕಿ

ಮುಖ್ಯಾಂಶಗಳು

ಉದಯವಾಣಿ ದಿನಪತ್ರಿಕೆಯಲ್ಲಿ ವಿಸ್ತೃತ ವರದಿ, ಶಿಕ್ಷಣ ಇಲಾಖೆಯಿಂ



# ವಿಜಯ ಕರ್ನಾಟಕ 6-8-2024

## ಶಿಕ್ಷಕರ ಸೃಜನಶೀಲತೆಗೆ ಕೈಗನ್ನಡಿ ನಮ್ಮ ಶಾಲಾ ವಾರ್ತೆಗಳು

### ವೆಚ್ಚ ರಹಿತ ತಂತ್ರಜ್ಞಾನ ಬಳಸಿ ದೃಶ್ಯ ವಾಹಿನಿ ತೆರೆದ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು

**ಬಜಪೆ:** ಸೃಜನಶೀಲ ಮನಸ್ಸುಗಳು ಒಂದಾದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಸಾಕ್ಷಿ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ರೂಪಿಸಿದ ಸುದ್ದಿವಾಹಿನಿ 'ನಮ್ಮ ಶಾಲಾ ವಾರ್ತೆಗಳು'.

ಟಿವಿಯಲ್ಲಿ ವಾರ್ತೆ ನೋಡುವಾಗ ನನಗೂ ಅದೇ ರೀತಿ ಸ್ಕ್ರೀನ್‌ನಲ್ಲಿ ಕಾಣಿಸಿಕೊಳ್ಳಬೇಕೆಂಬ ಆಸೆಯಾಗುತ್ತಿತ್ತು.

-ಮೇಘನಾ, ವಿದ್ಯಾರ್ಥಿನಿ

-ಡಾ.ಅನಿತ್ ಕುಮಾರ್

# ಮಾದರಿ ಶಾಲೆ

ವಿಜಯ ಕರ್ನಾಟಕ VK Mangalore Edition 8.9.2024

### ಸವಾಲು-ಪ್ರತಿಸ್ಪರ್ಧೆಗಳ ನಡುವೆ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಪ್ರಗತಿಯ ಯಶೋಗಾಥೆ

## ಉತ್ತಮ ದಾಖಲಾತಿ, ಶಿಕ್ಷಕರ ಪರಿಣತಿ, ಮಕ್ಕಳ ಪ್ರಗತಿ

**ವಾಮನ ಕರ್ಕೇರ ಕೊಲ್ಲೂರು** ಬಜಪೆ
feedbackvkmng@gmail.com

ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಎದುರಾಗುವ ಸವಾಲುಗಳು, ಪ್ರತಿಸ್ಪರ್ಧೆಗಳ ನಡುವೆಯೂ ಸರಕಾರಿ ಶಾಲೆಯೊಂದು ಮಾದರಿಯಾಗಿ ಬೆಳವಣಿಗೆ ಕಾಣಬಹುದು ಎಂಬುದಕ್ಕೆ ಮಂಗಳೂರು ತಾಲೂಕಿನ ಬಡಗಎಕ್ಕಾರು ಸರಕಾರಿ ಪ್ರೌಢಶಾಲೆ ಉತ್ತಮ ನಿದರ್ಶನ.

**ಸರಕಾರಿ ಮಾದರಿ ಶಾಲೆ**
**ವಿಕ ಅಭಿಯಾನ**

ಈ ಯಶಸ್ಸು ಅನಾಯಾಸವಾಗಿ ಬಂದಿಲ್ಲ, ಪರಿಶ್ರಮದ ಫಲ. ತಮ್ಮನ್ನು ತಾವು ಪರಿಣತಿ ಹೊಂದಿದ ಸಂಪನ್ಮೂಲ ವ್ಯಕ್ತಿಗಳಾಗಿ ರೂಪಿಸಿಕೊಂಡಿರುವ ಶಿಕ್ಷಕರ ಸಮೂಹವೇ ಇಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ದಾಖಲಾತಿ ಕೂಡ ಏರುಗತಿಯಲ್ಲಿದೆ.


**ಉತ್ತಮ ದಾಖಲಾತಿಯ ಹಿನ್ನೆಲೆ:** 2007ರಲ್ಲಿ ಪ್ರತ್ಯೇಕವಾಗಿ ಪ್ರಾರಂಭಗೊಂಡ ಶಾಲೆಗೆ ಈಗ 17 ವರ್ಷ. ಆರಂಭದ ವರ್ಷಗಳ ದಾಖಲಾತಿ ಅತ್ಯಲ್ಪವಿದ್ದರೂ ಇತ್ತೀಚಿನ ವರ್ಷಗಳಲ್ಲಿ ಏರಿಕೆ ಕಾಣುತ್ತಿದೆ.

2024- 25ನೇ ಸಾಲಿಗೆ 8ನೇ ತರಗತಿಗೆ 48 ಹಾಗೂ 9ನೇ ತರಗತಿಗೆ ನೇರ ದಾಖಲಾತಿ 12 ಸೇರಿದಂತೆ 8, 9, 10ರ ಒಟ್ಟು ಮಕ್ಕಳ ಸಂಖೆ 130. ಇದಕ್ಕಾಗಿ ಎಸ್‌ಡಿಎಂಸಿ ಸಹಕಾರ ಪಡೆದು ಇಲ್ಲಿನ ಪ್ರತಿಭಾನ್ವಿತ ಶಿಕ್ಷಕರು ಸಾಧ್ಯವಾದಷ್ಟು ಮನೆಮನೆ ಭೇಟಿಯ ಮೂಲಕ ಮನವೊಲಿಸಿದ್ದಾರೆ. ಶಾಲೆ ಬಿಟ್ಟ ಮಕ್ಕಳನ್ನೂ ಮರಳಿ ಸೇರಿಸಿದ್ದಾರೆ. ಬೇರೆ ಬೇರೆ ಶಾಲೆಗಳಿಗೆ ಭೇಟಿ ನೀಡಿ ತಿಳಿಹೇಳಿದ್ದಾರೆ.

**ಎಸ್ಸೆಸ್ಸೆಲ್ಸಿ ಫಲಿತಾಂಶ ಅತ್ಯುತ್ತಮ:** ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಒಟ್ಟಾರೆ ಫಲಿತಾಂಶ ಶೇ.90ಕ್ಕಿಂತ ಹೆಚ್ಚು. 2016ರಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಗೊಂಡಿದ್ದು ಅಂದಿನಿಂದ ಇಂದಿನವರೆಗೂ ಆಂಗ್ಲ ಮಾಧ್ಯಮ ವಿಭಾಗ ದ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ದಾಖಲಿಸಿರುವುದು ಗಮನಾರ್ಹ.

**ಸಮುದಾಯದ ಜತೆಗೆ ಶಾಲೆ:** ಶಿಕ್ಷಕರ ನಡುವೆ, ಶಿಕ್ಷಕರು-ವಿದ್ಯಾರ್ಥಿಗಳು, ಶಿಕ್ಷಕರು-ಎಸ್‌ಡಿಎಂಸಿ, ಶಾಲೆ-ಸಮುದಾಯದ ನಡುವೆ ಬಾಂಧವ್ಯ ಉತ್ತಮವಾಗಿರುವುದೇ ಶಾಲೆಯ ಪ್ರಗತಿಗೆ ಮುಖ್ಯ ಕಾರಣ. ಸ್ಮಾರ್ಟ್ ಕ್ಲಾಸ್‌ಗೆ ಬೇಕಾದ ವ್ಯವಸ್ಥೆ, ಕಂಪ್ಯೂಟರ್‌ಗಳು, ಪೀಠೋಪಕರಣಗಳು ಇನ್ನಿತರ ಬೇಡಿಕೆಗಳನ್ನು ಪೂರೈಸುವಲ್ಲಿ ಎಂಆರ್‌ಪಿಎಲ್ ಸಂಸ್ಥೆ, ಲಯನ್ಸ್ ಕ್ಲಬ್ ಮುಚ್ಚೂರು-ನೀರುಡೆ, ಬಜಪೆ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್, ಸ್ಥಳೀಯ ಸಂಘ ಸಂಸ್ಥೆಗಳು ಸಹಕಾರ ನೀಡಿವೆ. ಸರಕಾರದ ಎಲ್ಲ ರೀತಿಯ ಸವಲತ್ತುಗಳನ್ನು ಸಮಯೋಜಿತವಾಗಿ ಒದಗಿಸುವಲ್ಲಿ ಶಾಸಕರ ಪ್ರಯತ್ನ ಮೆಚ್ಚುಗೆಗೆ ಪಾತ್ರವಾಗಿದೆ.

ಶಾಲೆಗೆ ಸ್ವತಂತ್ರ ಕಟ್ಟಡ ನಿರ್ಮಾಣಕ್ಕೆ ಸುಮಾರು ಒಂದೂವರೆ ಎಕರೆ ಜಾಗವನ್ನು ಕಟೀಲು ಪ್ರೌಢಶಾಲೆಯ ನಿವೃತ್ತ ವೈಸ್ ಪ್ರಿನ್ಸಿಪಾಲ್ ಉಮೇಶ್‌ರಾವ್ ಎಕ್ಕಾರು ಉಚಿತವಾಗಿ ನೀಡಿದ್ದಾರೆ.



### ಬೇಡಿಕೆಗಳೇನು?

- ವ್ಯವಸ್ಥಿತ,ವಿಸ್ತೃತ ಆಟದ ಮೈದಾನ, ಕ್ರೀಡಾ ಸಲಕರಣೆಗಳ ಪೂರೈಕೆ
- ಶಾಲಾ ಪರಿಸರದಲ್ಲಿ ಭದ್ರವಾದ ತಡೆಗೋಡೆ, ಆವರಣಗೋಡೆ.
- ಅಡುಗೆ ಕೋಣೆಯ ನವೀಕರಣ.
- ಕಚೇರಿ ಸಹಾಯಕ ಹುದ್ದೆ ಮಂಜೂರಾತಿ.

### ಪರಿಚಯಾತ್ಮಕ ಅಂಶಗಳು

- ವಿದ್ಯಾರ್ಥಿಗಳ ಸಂಖ್ಯೆ-130
- ಶಿಕ್ಷಕರ ಸಂಖ್ಯೆ- 1+10
- ಕೊಠಡಿಗಳು-11
- ಸ್ಮಾರ್ಟ್ ಕ್ಲಾಸ್, ಕಂಪ್ಯೂಟರ್ ಕ್ಲಾಸ್
- ಯೋಗ, ಕರಾಟೆ, ಯಕ್ಷಗಾನ ಶಿಕ್ಷಣ ವ್ಯವಸ್ಥೆ
- ಮಕ್ಕಳಿಗೆ ವಿಶೇಷ ಕ್ರೀಡಾ ತರಬೇತಿ, ಚಿತ್ರಕಲಾ ತರಬೇತಿ
- ಬಿಸಿಯೂಟದ ವ್ಯವಸ್ಥೆ ಉತ್ತಮ

ಎಲ್ಲ ಶಿಕ್ಷಕರ ಪರಿಶ್ರಮ, ಎಸ್‌ಡಿಎಂಸಿ ಸಹಕಾರದಿಂದ ಮಕ್ಕಳ ದಾಖಲಾತಿ ಹೆಚ್ಚಿದೆ. ಮಕ್ಕಳ ಶೈಕ್ಷಣಿಕ ಸಾಧನೆಯ ಮಟ್ಟ ಪರಿಗಣಿಸಿ ಶಿಕ್ಷಕರು ಕಲಿಕೆಗೆ ವಿಶೇಷ ಒತ್ತು ನೀಡುವುದರ ಜತೆಗೆ ಪೋಷಕರ ಜತೆ ನಿರಂತರ ಸಂವಹನ ನಡೆಸಿದ ಕಾರಣ ಉತ್ತಮ ಶೈಕ್ಷಣಿಕ ಫಲಿತಾಂಶವೂ ದಾಖಲಾಗಿದೆ. ಬೇಡಿಕೆಗೆ ಅನುಗುಣವಾಗಿ ಸ್ಥಳೀಯರು ಮಾತ್ರವಲ್ಲದೆ ಇತರ ದಾನಿಗಳು ಕೂಡ ಬಹಳ ಸಹಕಾರ ನೀಡಿದ್ದಾರೆ. ಕಳೆದ ಮೂರೂವರೆ ವರ್ಷದಿಂದ ತಿಂಗಳಿಗೆ ಸರಾಸರಿ 3 ಸಾವಿರದಂತೆ ದಾನಿಯೊಬ್ಬರು ವಿದ್ಯುತ್ ಬಿಲ್ ಪಾವತಿಸಿದ್ದು, ಶೈಕ್ಷಣಿಕ ಹಾಗೂ ಕ್ರೀಡಾ ಸಾಧನೆಗೆ ಪೂರಕವಾಗಿ ಬಜಪೆ ವ್ಯವಸಾಯ ಬ್ಯಾಂಕ್ ನಿರಂತರ ಪ್ರೋತ್ಸಾಹ ನೀಡಿದೆ. ಶಾಲಾ ರಸ್ತೆಗೆ ಶಾಸಕರ ನಿಧಿಯಿಂದ ಕಾಂಕ್ರಿಟೀಕರಣವಾಗಿದೆ.

**- ಇಂದಿರಾ ಎನ್.ರಾವ್** ಮುಖ್ಯ ಶಿಕ್ಷಕರು

ಶಿಕ್ಷಕರು-ವಿದ್ಯಾರ್ಥಿಗಳ ನಡುವೆ ಆತ್ಮೀಯ ಬಾಂಧವ್ಯ ಉತ್ತಮ ಫಲಿತಾಂಶಕ್ಕೆ ಪೂರಕವಾಗಿದೆ. ಶಾಲಾ ಅಗತ್ಯಗಳಿಗೆ ದಾನಿಗಳ ಸಹಕಾರ ಪಡೆಯಲಾಗುತ್ತಿದೆ. ಹಂತ ಹಂತವಾಗಿ ಶಾಲೆಯ ಇತರ ಅಗತ್ಯ ಬೇಡಿಕೆಗಳನ್ನು ಸಾಕಾರಗೊಳಿಸುವ ಪ್ರಯತ್ನವಿದೆ.

**- ಸುದೀಪ್ ಆರ್.ಅಮೀನ್,** ಅಧ್ಯಕ್ಷರು, ಎಸ್‌ಡಿಎಂಸಿ

- ಶಾಲಾ ದೈಹಿಕ ಶಿಕ್ಷಣ ಶಿಕ್ಷಕಿ ವಿದ್ಯುಲ್ಲತಾ ಅವರಿಗೆ ಈ ವರ್ಷದ ಜಿಲ್ಲಾಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ದೊರೆತಿದೆ.
- ಚೆನ್ನೈನಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಶಾಲೆಯ ಬಾಲಕಿಯರ ಖೋ ಖೋ ತಂಡ ದ್ವಿತೀಯ ಸ್ಥಾನ ಪಡೆದಿದೆ.
- ಕಳೆದ ವರ್ಷ ಶಾಲಾ ವಾರ್ಷಿಕೋತ್ಸವದಲ್ಲಿ ಪ್ರತಿ ವಿದ್ಯಾರ್ಥಿಯೂ ಕನಿಷ್ಠ ಒಂದಾದರೂ ಕ್ರೀಡೆಯಲ್ಲಿ ಪಾಲ್ಗೊಳ್ಳಲೇಬೇಕು ಎಂದು ನಿರ್ದೇಶಿಸಿ 1000ಕ್ಕೂ ಮಿಕ್ಕಿ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗಿತ್ತು.
- ವಾರ್ಷಿಕೋತ್ಸವದಲ್ಲಿ 40 ಮಕ್ಕಳಿಂದ ಯಕ್ಷಗಾನ ಪ್ರದರ್ಶಿಸಲಾಗಿತ್ತು. ಎಲ್ಲ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ಮೊಬೈಲ್ ತಂತ್ರಜ್ಞಾನ ಬಳಸಿ ನಮ್ಮ ಶಾಲಾ ವಾರ್ತೆಗಳು ಎಂಬ ಸುದ್ದಿವಾಹಿನಿ ಯೂಟ್ಯೂಬ್ ಹಾಗೂ ಇನ್ನಿತರ ಜಾಲತಾಣಗಳಲ್ಲಿ ಹರಿಯಬಿಡಲಾಗುತ್ತಿದೆ.
- ಮೊಬೈಲ್ ಆ್ಯಪ್ ಮೂಲಕ ಇವಿಎಂ ಮೆಷಿನ್ ಬಳಸಿ ಸಾರ್ವತ್ರಿಕ ಚುನಾವಣೆ ಮಾದರಿಯಲ್ಲಿ ವಿದ್ಯಾರ್ಥಿ ಸಂಸತ್ತಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿದೆ.

ಉದಯವಾಣಿ

3/4

# ಅಹಿಂಸಾ ತತ್ವ ಇಂದಿನ ಅಗತ್ಯ



**ಬಜಪೆ, ಅ. 2:** ಜಗತ್ತಿನಲ್ಲಿ ಯುದ್ಧದ ಕಾರ್ಮೋಡ ಕವಿದಿರುವ ಈ ಸಂದರ್ಭದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರತಿಯೊಂದು ದೇಶಗಳು ಭಾರತ ದತ್ತ ನೋಡುತ್ತಿದೆ. ಇದಕ್ಕೆ ಪ್ರಮುಖ ಕಾರಣ ಗಾಂಧೀಜಿಯ ಅಹಿಂಸಾ ತತ್ವ. ಇದರ ಮಹತ್ವವನ್ನು ಅರಿತು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ ಎಂದು ಶಿಕ್ಷಕಿ ಚಿತ್ರಾಶ್ರೀ ಕೆ.ಎಸ್. ಹೇಳಿದರು.

ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಯಲ್ಲಿ ನಡೆದ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಅಹಿಂಸೆಯನ್ನು ಪಾಲಿಸುವ ಬಗ್ಗೆ, ತಂಬಾಕು ಮತ್ತು ಮಾದಕ ವಸ್ತುಗಳಿಂದ ದೂರವಿರುವ ಕುರಿತಾದ ಪ್ರತಿಜ್ಞಾ ವಿಧಿಯನ್ನು ಕೈಗೊಂಡು ಜಾಥಾ ನಡೆಸಿದರು. ಗಾಂಧೀಜಿ ಬಗ್ಗೆ ಅಪ್ಸಾನ ಬಾನು, ಲಾಲ್ ಬಹದ್ದೂರ್ ಶಾಸ್ತ್ರಿಗಳ ಬಗ್ಗೆ ಪ್ರತಿಕ್ಷಾ ಆರ್. ಶೆಟ್ಟಿ ಭಾಷಣವನ್ನು ಮಾಡಿದರು.

ಶಾಲಾ ಆವರಣ ಹಾಗೂ ಶಾಲೆಯ ಸಮೀಪದ ಬಸ್ ನಿಲ್ದಾಣದ ಸ್ವಚ್ಛತೆಯನ್ನು ಶಾಲಾ ಇಂಟರಾಕ್ಟ್ ಕ್ಲಬ್, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಶಿಕ್ಷಕರು ಕೈಗೊಂಡರು. ವಿಠ್ಠಲ್ ದಾಸ ನಾಯಕ್ ವತಿಯಿಂದ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಯನ್ನು ವಿತರಿಸಲಾಯಿತು.

ವಿನ್ನಿ ನಿರ್ಮಲ ಡಿ'ಸೋಜಾ ಸ್ವಾಗತಿಸಿ ನಿರೂಪಿಸಿದರು. ಮುಖ್ಯೋಪಾಧ್ಯಾಯಿನಿ ಇಂದಿರಾ ಎನ್. ರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿಜಯ ಕರ್ನಾಟಕ

ಶನಿವಾರ, 5 ಅಕ್ಟೋಬರ್ 2024, ಮಂಗಳೂರು

# ಬಡಗ ಎಕ್ಕಾರು ಶಾಲೆಯಲ್ಲಿ ರಾಷ್ಟ್ರಪ್ರೇಮ ಜಾಗೃತಿ ಜಾಥಾ

**ಬಜಪೆ :** ರಾಷ್ಟ್ರಧ್ವಜದ ಮಹತ್ವ ಹಾಗೂ ರಾಷ್ಟ್ರಪ್ರೇಮ ಜಾಗೃತಿ ಕುರಿತು ಜಾಥಾ ಹಾಗೂ ತಂಬಾಕು, ಮಾದಕ ದ್ರವ್ಯ ವಿರೋಧಿಸಿ ಪ್ರತಿಜ್ಞಾ ಸ್ವೀಕಾರದೊಂದಿಗೆ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನ ಆಚರಿಸಲಾಯಿತು.

ಶಿಕ್ಷಕಿ ಚಿತ್ರಾಶ್ರೀ ಗಾಂಧೀಜಿ ಹಾಗೂ ಶಾಸ್ತ್ರೀ ಅವರ ಬದುಕಿನ ಆದರ್ಶಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳಿಗೆ ನಡೆಸಲಾದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮುಖ್ಯಶಿಕ್ಷಕಿ ಇಂದಿರಾ ಎನ್.ರಾವ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ವಿನ್ನಿ ನಿರ್ಮಲಾ ಕಾರ್ಯಕ್ರಮ ನಿರೂಪಿಸಿದರು.



**ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರಪ್ರೇಮ ಜಾಗೃತಿ ಜಾಥಾ ನಡೆಯಿತು.**

# ಅಹಿಂಸೆಯ ಮಹತ್ವ ತಿಳಿಯಲಿ: ಸಲಹೆ

ಪ್ರಜಾವಾಣಿ ವಾರ್ತೆ

ಬಜಪೆ: ಅಹಿಂಸೆಯ ಮಹತ್ವವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ ಎಂದು ಶಿಕ್ಷಕಿ ಚಿತ್ರಾಶ್ರೀ ಕೆ.ಎಸ್. ಹೇಳಿದರು.

ಬಡಗ ಎಕ್ಕಾರು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನಾಚರಣೆಯಲ್ಲಿ ಅವರು ಮಾತನಾಡಿದರು.

ಅಹಿಂಸೆಯನ್ನು ಪಾಲಿಸುವ ಬಗ್ಗೆ, ತಂಬಾಕು, ಮಾದಕ ವಸ್ತುಗಳಿಂದ ದೂರವಿರುವ ಕುರಿತು ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ವಿದ್ಯಾರ್ಥಿನಿಯರಾದ ಅಪ್ಸಾನ ಬಾನು, ಪ್ರತಿಕ್ಷಾ ಆರ್.ಶೆಟ್ಟಿ ಮಾತನಾಡಿದರು.

ವಿವಿಧೆಡೆ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.

ಮುಖ್ಯಶಿಕ್ಷಕಿ ಇಂದಿರಾ ಎನ್. ರಾವ್, ನಿರ್ಮಲಾ ಎನ್.ರಾವ್, ವಿನ್ನಿ ನಿರ್ಮಲ ಡಿಸೋಜ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿಠ್ಠಲ್ ದಾಸ ನಾಯಕ್ ಅವರ ವತಿಯಿಂದ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಿಸಲಾಯಿತು.



ಬಜಪೆ ಸಮೀಪದ ಬಡಗ ಎಕ್ಕಾರು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನಾಚರಣೆ ಅಂಗವಾಗಿ ವಿವಿಧೆಡೆ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು

ವಿಜಯ ಕರ್ನಾಟಕ VK
ಶನಿವಾರ,28 ಸೆಪ್ಟೆಂಬರ್ 2024

# ಖೋಖೋ ಪಂದ್ಯಾಟ: ಬಡಗ ಎಕ್ಕಾರು ಪ್ರೌಢಶಾಲೆ ಬಾಲಕಿಯರ ತಂಡ ಮೈಸೂರು ವಿಭಾಗ ಮಟ್ಟಕ್ಕೆ ಆಯ್ಕೆ



ಪ್ರಶಸ್ತಿ ಸ್ವೀಕರಿಸುತ್ತಿರುವ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಬಾಲಕಿಯರ ತಂಡ.

■ **ವಿಕ ಸುದ್ದಿಲೋಕ** ಬಜಪೆ

ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಬಾಲಕಿಯರ ಖೋಖೋ ತಂಡ ಬಂಟ್ವಾಳ ನಯನಾಡಿನಲ್ಲಿ ಶುಕ್ರವಾರ ನಡೆದ ದ.ಕ. ಜಿಲ್ಲಾ ಮಟ್ಟದ ಪ್ರೌಢ ಶಾಲಾ ವಿಭಾಗದ ಖೋಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ನಡೆಯಲಿರುವ ವಿಭಾಗಮಟ್ಟದ ಪಂದ್ಯಾವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಲು ಆಯ್ಕೆಯಾಗಿದೆ.

ಬಾಲಕರ ವಿಭಾಗದಲ್ಲಿ ವಿವೇಕಾನಂದ ಪ್ರೌಢಶಾಲೆ ಪುತ್ತೂರು ಪ್ರಥಮ ಸ್ಥಾನ ಪಡೆದು ವಿಭಾಗಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ. ಬಾಲಕಿಯರ ವಿಭಾಗದಲ್ಲಿ ಆತಿಥೇಯ ಸರಕಾರಿ ಪ್ರೌಢಶಾಲೆ ನಯನಾಡು ಹಾಗೂ ಬಾಲಕರ ವಿಭಾಗದಲ್ಲಿ ಇನ್ಫೆಂಟ್ ಮೇರಿ ಪ್ರೌಢಶಾಲೆ ಕಾಟಿಪಳ್ಳ - ಸುರತ್ಕಲ್ ರನ್ನರ್ ಅಪ್ ಪ್ರಶಸ್ತಿ ಪಡೆದಿದ್ದಾರೆ.

**ವೈಯಕ್ತಿಕ ಪ್ರಶಸ್ತಿಗಳು: ಬಾಲಕಿಯರ ವಿಭಾಗ:** ಬೆಸ್ಟ್ ಚೇಸರ್ - ಶ್ರಾವ್ಯ (ನಯನಾಡು), ಬೆಸ್ಟ್ ರನ್ನರ್ - ದರ್ಶಿನಿ ಕುಲಾಲ್ (ಬಡಗ ಎಕ್ಕಾರು), ಬೆಸ್ಟ್ ಆಲ್ ರೌಂಡರ್ - ಸ್ಮಿತಾ (ಬಡಗ ಎಕ್ಕಾರು). **ಬಾಲಕರ ವಿಭಾಗ:** ಬೆಸ್ಟ್ ಚೇಸರ್ - ಲಿಖಿತ್ (ಪುತ್ತೂರು), ಬೆಸ್ಟ್ ರನ್ನರ್ - ಅಲೆನ್ (ಮಂಗಳೂರು ಉತ್ತರ), ಬೆಸ್ಟ್ ಆಲ್‌ರೌಂಡರ್ - ತರುಣ್ (ಪುತ್ತೂರು).

ವಿಜಯ ಕರ್ನಾಟಕ VK
ಶುಕ್ರವಾರ,4 ಅಕ್ಟೋಬರ್ 2024

ಮೂಲ್ಕಿ ಹೋಬಳಿ ಮಟ್ಟದ ಪ್ರೌಢಶಾಲಾ ಅಥ್ಲೆಟಿಕ್ಸ್ ಕ್ರೀಡಾಕೂಟ

# ಬಜಪೆ ಸೈಂಟ್ ಜೋಸೆಫ್ ಬಾಲಕರು, ಬಡಗ ಎಕ್ಕಾರು ಬಾಲಕಿಯರಿಗೆ ಪ್ರಶಸ್ತಿ





■ **ವಿಕ ಸುದ್ದಿಲೋಕ** ಬಜಪೆ

ಬಜಪೆ ಸೈಂಟ್ ಜೋಸೆಫ್ ಪ್ರೌಢಶಾಲೆ ಬಾಲಕರ ತಂಡ ಕಟೀಲು ಶ್ರೀ ದುರ್ಗಾ ಪರಮೇಶ್ವರೀ ದೇವಳ ಪಿಯು ಕಾಲೇಜು ಕ್ರೀಡಾಂ ಗಣ ದಲ್ಲಿ ಮಂಗಳ ವಾರ ಜರುಗಿದ ಮೂಲ್ಕಿ ಹೋಬಳಿ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್ ಷಿಪ್ ಪ್ರಶಸ್ತಿ ಪಡೆದಿದ್ದಾರೆ. ಸಂಸ್ಥೆಯ ವಿದ್ಯಾರ್ಥಿ ರೆನ್ವಿಲ್ ಮಥಾಯಸ್ ಬಾಲಕರ ವಿಭಾಗದ ವೈಯಕ್ತಿಕ ಚಾಂಪಿ ಯನ್‌ಷಿಪ್ ಪಡೆದಿದ್ದಾರೆ.

**ರೆನ್ವಿಲ್ ಮಥಾಯಸ್ ವೈಯಕ್ತಿಕ ಪ್ರಶಸ್ತಿ**

ಕ್ರೀಡಾಕೂಟದಲ್ಲಿ 7 ಪ್ರಥಮ, 5 ದ್ವಿತೀಯ, 6 ತೃತೀಯ ಬಹುಮಾನ ಗಳೊಂದಿಗೆ ಒಟ್ಟು 18 ಪದಕಗಳನ್ನು ಪಡೆದು ಸಮಗ್ರ ಚಾಂಪಿಯನ್‌ಷಿಪ್ ಪಡೆದಿದೆ.

ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯರು ಸಮಗ್ರ ಪ್ರಶಸ್ತಿ ಪಡೆದಿದ್ದಾರೆ ಹಾಗೂ ಶಾಲೆಯ ವಿದ್ಯಾರ್ಥಿನಿ ದರ್ಶಿನಿ ಕುಲಾಲ್ ವೈಯಕ್ತಿಕ ಚಾಂಪಿಯನ್ ಪುರಸ್ಕಾರ ಪಡೆದಿದ್ದಾರೆ.

**ದರ್ಶಿನಿ ಕುಲಾಲ್‌ಗೆ ವೈಯಕ್ತಿಕ ಪ್ರಶಸ್ತಿ**

ದರ್ಶಿನಿ ಕುಲಾಲ್ 800ಮೀ., 1500 ಮೀ. ಹಾಗೂ 3000 ಮೀಟರ್ ಓಟದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸುವುದರೊಂದಿಗೆ ಕ್ರೀಡಾಕೂಟದ ವೈಯಕ್ತಿಕ ಪ್ರಶ್ತಿ ಗಳಿಸಿದ್ದಾರೆ. 400ಮೀ. ಓಟ - ಸ್ಮಿತಾ, 600ಮೀ ಓಟ - ಸಾನ್ವಿ, 5ಕಿ.ಮೀ. ನಡಿಗೆ - ವಿನೀತ್ ಹಾಗೂ ಬಾಲಕಿಯರ 4ಗಿ 400 ಮೀ. ರಿಲೇ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದರು.

ಒಟ್ಟಾರೆಯಾಗಿ 8 ಪ್ರಥಮ, 10 ದ್ವಿತೀಯ, 9 ತೃತೀಯ ಬಹುಮಾನ ಗಳೊಂದಿಗೆ ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ಸಮಗ್ರ ಪ್ರಶಸ್ತಿ ಪಡೆಯಿತು.



ಮಂಗಳೂರು ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಮಹಿಳೆಯರ ವಿಭಾಗದ ಕೊಕ್ಕೊ ಟೂರ್ನಿಯಲ್ಲಿ ಸರ್ಕಾರಿ ಪ್ರೌಢಶಾಲೆ ಬಡಗ ಎಕ್ಕಾರು ಪ್ರಥಮ ಸ್ಥಾನ ಗಳಿಸಿದೆ. ಅಥ್ಲೆಟಿಕ್ಸ್ ವಿಭಾಗದಲ್ಲಿ 100 ಮೀಟರ್ ಓಟದ ವಿಭಾಗದಲ್ಲಿ ಭೂಮಿಕಾ ಹೆಗಡೆ ತೃತೀಯ ಸ್ಥಾನ, 3000 ಮೀಟರ್ ಓಟದಲ್ಲಿ ದರ್ಶಿನಿ ದ್ವಿತೀಯ ಸ್ಥಾನ, ಟ್ರಿಪಲ್ ಜಂಪ್‌ನಲ್ಲಿ ಸ್ಮಿತಾ ದ್ವಿತೀಯ, ಭೂಮಿಕಾ ಹೆಗಡೆ ತೃತೀಯ ಸ್ಥಾನ ಪಡೆದರು

# ರಾಜ್ಯಮಟ್ಟಕ್ಕೆ ಆಯ್ಕೆ



ಅದಿತಿ



ಕೀರ್ತಿ

**ಬಜಪೆ:** ಪುತ್ತೂರು ತಾಲೂಕು ಉಪ್ಪಿನಂಗಡಿ ಕಾಂಚನಾ ಪ್ರೌಢಶಾಲೆಯಲ್ಲಿ ದ. ಕ. ಜಿಲ್ಲಾ ಶಿಕ್ಷಣ ಇಲಾಖೆ ವತಿಯಿಂದ ಜರುಗಿದ ಜಿಲ್ಲಾಮಟ್ಟದ ಜಂಪ್ ರೋಪ್ ಸ್ಪರ್ಧೆ ಯಲ್ಲಿ ಬಡಗ ಎಕ್ಕಾರು ಸರಕಾರಿ ಪ್ರೌಢ ಶಾಲೆ ವಿದ್ಯಾರ್ಥಿನಿಯರಾದ ಅದಿತಿ ಫ್ರೀಸ್ಟೈಲ್ ವಿಭಾಗ ಹಾಗೂ ಕೀರ್ತಿ ಸ್ಪೀಡ್ ಥರ್ಟಿ ಸೆಕೆಂಡ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.






# ನೆಟ್‌ಬಾಲ್‌ನಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ




**ಬಜಪೆ:** ಬಡಗ ಎಕ್ಕಾರು ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಮೌಲ್ಯ ಆರ್.ಶೆಟ್ಟಿ ನೆಟ್‌ಬಾಲ್ ರಾಜ್ಯಮಟ್ಟದ ತಂಡಕ್ಕೆ ಆಯ್ಕೆಯಾಗಿದ್ದಾರೆ. ಶಾಲಾ ಶಿಕ್ಷಣ ಮಂಡಳಿ ವತಿಯಿಂದ ಕುಲಶೇಖರ ಸೇಕ್ರೆಡ್ ಹಾರ್ಟ್ ಪ್ರೌಢಶಾಲೆಯಲ್ಲಿ ಆಯ್ಕೆ ಪ್ರಕ್ರಿಯೆ ಜರು ಗಿತು. ದೈಹಿಕ ಶಿಕ್ಷಣ ಶಿಕ್ಷಕಿ ಮೌಲ್ಯ ಆರ್.ಶೆಟ್ಟಿ ವಿದ್ಯಾಲತಾ ತರಬೇತಿ ನೀಡಿದ್ದರು.












# ವಿದ್ಯಾಗೌರಿ ಪ್ರಥಮ

ಬಜಪೆ: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರ ಮಂಗಳೂರು ಉತ್ತರ ವಲಯವು ಸುರತ್ಕಲ್‌ನ ವಿದ್ಯಾದಾಯಿನಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಪ್ರೌಢಶಾಲಾ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಯ ಪ್ರಬಂಧ ಸ್ಪರ್ಧೆಯಲ್ಲಿ ಬಡಗ ಎಕ್ಕಾರು ಸರ್ಕಾರಿ ಪ್ರೌಢಶಾಲೆಯ ಕನ್ನಡ

ವಿದ್ಯಾಗೌರಿ





# FLN ACTIVITIES












## ಸೇವಾ ಮನೋಭಾವದ ಮುಖ್ಯ ಶಿಕ್ಷಕರು ಮತ್ತು  ಶಾಲಾ ಶಿಕ್ಷಕ ವೃಂದ





# ಧನ್ಯವಾದಗಳು